**ಕರ್ನಾಟಕ ವಿಧಾನ ಪರಿಷತ್ತು**

# “ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ರ ಪರಿಶೀಲನಾ ಸಮಿತಿಯ ವರದಿ”

## (2023ರ ವಿಧಾನಸಭೆಯ ವಿಧೇಯಕ ಸಂಖ್ಯೆ – 04)

**ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ:14.02.2024**

ಶಾಸನ ರಚನಾ ಶಾಖೆ
ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನಸೌಧ, ಬೆಂಗಳೂರು-560001

# ವಿಷಯ ಸೂಚಿ


| ಕ್ರಮ ಸಂಖ್ಯೆ | ವಿಷಯಾನುಕ್ರಮಣಿಕೆ | ಪುಟ ಸಂಖ್ಯೆ |
|---|---|---|
| 01 | ಸಮಿತಿಯ ರಚನೆ | i |
| 02 | ಮುನ್ನುಡಿ | ii |
| 03 | ವರದಿ | 1-21 |
| 04 | ಅನುಬಂಧ | 22-29 |

# **ಸಮಿತಿಯ ರಚನೆ**

**ಶ್ರೀಮತಿ/ಶ್ರೀಯುತರುಗಳಾದ:-**

| | | |
|---|---|---|
| 01. | **ಶಿವಾನಂದ ಎಸ್ ಪಾಟೀಲ್** | **: ಅಧ್ಯಕ್ಷರು ಮತ್ತು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು** |
| 02. | **ಹೆಚ್. ಕೆ. ಪಾಟೀಲ್** | **: ಸದಸ್ಯರು ಮತ್ತು ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು** |
| 03. | ಪ್ರಕಾಶ್ ಕೆ. ರಾಥೋಡ್ | : ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು |
| 04. | ಎಸ್. ರವಿ | ——"—— |
| 05. | ಡಿ.ಎಸ್. ಅರುಣ್ | ——"—— |
| 06. | ಕೇಶವ ಪ್ರಸಾದ್ ಎಸ್ | ——"—— |
| 07. | ಕೆ.ಎ. ತಿಪ್ಪೇಸ್ವಾಮಿ | ——"—— |
| 08. | ಎಂ.ಎಲ್. ಅನಿಲ್ ಕುಮಾರ್ | ——"—— |
| 09. | ಹೇಮಲತಾ ನಾಯಕ್ | ——"—— |

## **ವಿಧಾನ ಪರಿಷತ್ತಿನ ಸಚಿವಾಲಯ**

**ಶ್ರೀಮತಿ/ಶ್ರೀಯುತರುಗಳಾದ:-**

| | | |
|---|---|---|
| 01. | ಕೆ.ಆರ್.ಮಹಾಲಕ್ಷ್ಮಿ | ಕಾರ್ಯದರ್ಶಿ |
| 02. | ಎಸ್.ನಿರ್ಮಲ | ಅಪರ ಕಾರ್ಯದರ್ಶಿ |
| 03. | ಬಿ.ಎ ಬಸವರಾಜು | ಉಪ ಕಾರ್ಯದರ್ಶಿ |
| 04. | ಕೆ.ರೇಖಾ | ಅಧೀನ ಕಾರ್ಯದರ್ಶಿ |
| 05. | ಆರ್.ಸಂಪತ್ತು | ಶಾಖಾಧಿಕಾರಿ |

# ಮುನ್ನುಡಿ

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ದಿನಾಂಕ:18.07.2023ರಂದು ವಿಧಾನ ಪರಿಷತ್ತಿನಲ್ಲಿ ಪರ್ಯಾಲೋಚನೆಗೆ ಮಂಡಿಸಿದ ಸಂದರ್ಭದಲ್ಲಿ ವಿಧೇಯಕದ ಮೇಲೆ ವ್ಯಾಪಕವಾಗಿ ಚರ್ಚೆ ನಡೆದಿದ್ದು ಸದರಿ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ತರಲು ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಲು ಮಾನ್ಯ ಸದಸ್ಯರುಗಳು ಒತ್ತಾಯಿಸಿರುವ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 116ರ ಅನ್ವಯ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ವಹಿಸಿ ಸಮಿತಿಯು ಮೂರು ತಿಂಗಳೊಳಗಾಗಿ ಸದನಕ್ಕೆ ವರದಿ ನೀಡಲು ದಿನಾಂಕ:08.09.2023ರಂದು ಮಾನ್ಯ ಸಭಾಪತಿಯವರು ಪರಿಶೀಲನಾ ಸಮಿತಿಯನ್ನು ರಚಿಸಿರುತ್ತಾರೆ.

ವಿಧೇಯಕ ಪರಿಶೀಲನಾ ಸಮಿತಿಗೆ ವರದಿಯನ್ನು ಸಲ್ಲಿಸಲು ದಿನಾಂಕ: 08.09.2023 ರಿಂದ ಮೂರು ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿತ್ತು. ತದನಂತರ ದಿನಾಂಕ: 07.12.2023 ರಿಂದ ಮೂರು ತಿಂಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನವು ಅನುಮೋದನೆಯನ್ನು ನೀಡಿರುತ್ತದೆ.

ದಿನಾಂಕ: 31.01.2024 ರಂದು ಸಮಿತಿಯು ವರದಿಯನ್ನು ಅಂಗೀಕರಿಸಿರುತ್ತದೆ.

ಈ ಸಂದರ್ಭದಲ್ಲಿ ವಿಧೇಯಕ ಪರಿಶೀಲನಾ ಸಮಿತಿಯ ಸಭೆಗಳಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಭೇಟಿ ಮತ್ತು ಸಭೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ಮತ್ತು ಸಮಿತಿಗೆ ಸಹಕರಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕೋಲಾರ, ಶಿವಮೊಗ್ಗ, ಕಲಬುರಗಿ, ರಾಯಚೂರು ಜಿಲ್ಲಾಧಿಕಾರಿಗಳು, ಕೃಷಿ ಮಾರಾಟ ಇಲಾಖೆಯ ಅಧಿಕಾರಿಗಳು ಹಾಗೂ ವಿಧಾನ ಪರಿಷತ್ತಿನ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
ದಿನಾಂಕ:31.01.2024

**ಶಿವಾನಂದ ಎಸ್. ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ, ಮತ್ತು ಸಕ್ಕರೆ ಹಾಗೂ
ಕೃಷಿ ಮಾರುಕಟ್ಟೆ ಸಚಿವರು ಮತ್ತು ಅಧ್ಯಕ್ಷರು,
ಪರಿಶೀಲನಾ ಸಮಿತಿ

# ವರದಿ

" ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ವಿಧಾನ ಸಭೆಯಲ್ಲಿ ದಿನಾಂಕ 17.07.2023ರಂದು ಮಂಡಿಸಿ, ಪರ್ಯಾಲೋಚಿಸಿ ಅಂಗೀಕರಿಸಿರುತ್ತದೆ.

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ದಿನಾಂಕ:18.07.2023ರಂದು ವಿಧಾನ ಪರಿಷತ್ತಿನಲ್ಲಿ ಪರ್ಯಾಲೋಚನೆಗೆ ಮಂಡಿಸಿದ ಸಂದರ್ಭದಲ್ಲಿ ವಿಧೇಯಕದ ಮೇಲೆ ವ್ಯಾಪಕವಾಗಿ ಚರ್ಚೆ ನಡೆದಿದ್ದು ಸದರಿ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಲು ಮಾನ್ಯ ಶಾಸಕರುಗಳು ಒತ್ತಾಯಿಸಿರುವ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 116ರ ಅನ್ವಯ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ವಹಿಸಿ ಸಮಿತಿಯು ಮೂರು ತಿಂಗಳೊಳಗಾಗಿ ಸದನಕ್ಕೆ ವರದಿ ನೀಡಲು ದಿನಾಂಕ:08.09.2023ರಂದು ಮಾನ್ಯ ಸಭಾಪತಿಯವರು ಪರಿಶೀಲನಾ ಸಮಿತಿಯನ್ನು ರಚಿಸಿರುತ್ತಾರೆ. (ವಿಧೇಯಕವನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ)

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 229(1)ರ ರೀತ್ಯಾ ಸಂಬಂಧಪಟ್ಟ ಸಚಿವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಮಾನ್ಯ ಕಾನೂನು ಸಚಿವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿರುತ್ತದೆ. ಅದರಂತೆ, ದಿನಾಂಕ:08.09.2023ರಂದು ಪರಿಶೀಲನಾ ಸಮಿತಿಯು ರಚನೆಗೊಂಡಿರುತ್ತದೆ. (ಸಮಿತಿಯ ರಚನೆಯ ಕುರಿತು ಹೊರಡಿಸಲಾಗಿರುವ ಲಘು ಪ್ರಕಟಣೆ ಸಂಖ್ಯೆ: 42ನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ) ತದನಂತರ ದಿನಾಂಕ: 07.12.2023ರಿಂದ ಮೂರು ತಿಂಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನವು ಅನುಮೋದನೆಯನ್ನು ನೀಡಿರುತ್ತದೆ.

ಪರಿಶೀಲನಾ ಸಮಿತಿಯು ದಿ:16.10.2023 ರಂದು ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಪ್ರಾರಂಭಿಕ ಸಭೆಯನ್ನು ನಡೆಸಿತು. ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಪ್ರಾರಂಭಿಕ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಮಿತಿಯ ರಚನೆಯ ಉದ್ದೇಶದ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿ ಸಮಿತಿಯ ಮಾನ್ಯ ಸದಸ್ಯರುಗಳು ಹಾಜರಿರುವ ಇಲಾಖಾ ಅಧಿಕಾರಿಗಳಿಂದ ಮಾಹಿತಿ ಪಡೆಯಬಹುದಾಗಿದೆ ಮತ್ತು ಚರ್ಚಿಸಿ ಸೂಕ್ತವಾಗಿ ತೀರ್ಮಾನ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಇವರು ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ವ್ಯವಸ್ಥೆ ರಚನೆ, ಜಾರಿ ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ವಿವರವನ್ನು ಸಮಿತಿಗೆ ಒದಗಿಸಿದರು. ವಿಧಾನ ಸಭೆಯಲ್ಲಿ ಅಂಗೀಕೃತವಾಗಿರುವ ತಿದ್ದುಪಡಿ ವಿಧೇಯಕ ಮತ್ತು ಹಾಲಿ ಜಾರಿಯಲ್ಲಿರುವ ಕಾನೂನಿನ ಕುರಿತು ವಿಚಾರ ವಿನಿಮಯ ನಡೆಸಲಾಯಿತು.

ತಿದ್ದುಪಡಿ ವಿಧೇಯಕದಲ್ಲಿ ಕಾರಣ ಮತ್ತು ಹೇಳಿಕೆಗಳಲ್ಲಿ ಇರುವ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿ ಹಾಲಿ ಇರುವ ಕಾನೂನಿನಲ್ಲಿ ರೈತರು ತಮ್ಮ ಬೆಳೆಯನ್ನು ಮಾರಲು ಹಾಗೂ ಬೆಲೆ ನಿರ್ಧರಿಸಲು ಹಕ್ಕು ಇರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ರೈತರನ್ನು ಮಾರುಕಟ್ಟೆ ಪ್ರಾಂಗಣಗಳಲ್ಲಿಯೇ ಮಾರಾಟ ಮಾಡಬೇಕೆಂದು ಕಡ್ಡಾಯಗೊಳಿಸುವುದರ ಅಗತ್ಯತೆ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಯಿತು. ಲೈಸೆನ್ಸ್ ಪಡೆದ ವರ್ತಕರು ಲೈಸೆನ್ಸ್ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ. ರೈತರಿಂದ ರಚನೆಯಾಗುವ ಆಡಳಿತ ಮಂಡಳಿಗಳು ಮಾರುಕಟ್ಟೆ ಸಮಿತಿಗಳು ಸ್ಥಾಪಿಸುವ ಪ್ರಾಂಗಣದಲ್ಲಿ ನಡೆಯುವ ಚಟುವಟಿಕೆಗಳ ನಿಯಂತ್ರಣ, ರೈತರು ತರುವ ಉತ್ಪನ್ನಗಳು ಮಾರಾಟ ಮಾಡುವುದಕ್ಕೆ ಇರುವ ವಿವಿಧ ಆಯ್ಕೆಗಳಾದ ಟೆಂಡರ್ ಪದ್ಧತಿ, ನೇರ ಮಾರಾಟ, ಬಹಿರಂಗ ಹರಾಜು ಮುಂತಾದ ಪದ್ಧತಿಗಳ ಮೂಲಕ ರೈತರಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುತ್ತದೆ. ಇದಲ್ಲದೇ, ಉತ್ಪನ್ನಗಳ ತೂಕ, ಬೆಲೆ ಹಾಗೂ ಇತರೆ ಯಾವುದೇ ವಿಷಯಗಳಿಗೆ ರೈತರು ಮತ್ತು ವರ್ತಕರ ನಡುವೆ ವಿವಾದಗಳು ಉಂಟಾದಲ್ಲಿ ರೈತ ಪ್ರತಿನಿಧಿಗಳೇ ಇರುವ ಶಾಸನಬದ್ಧ ವಿವಾದ ಪರಿಹಾರ ಸಮಿತಿಯು ತಕ್ಷಣ ರೈತರಿಗೆ ನ್ಯಾಯ ಒದಗಿಸಲು ಇರುವ ಅವಕಾಶಗಳು ಮತ್ತು ಈಗಾಗಲೇ ರಾಜ್ಯದಲ್ಲಿ ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ ಸುಮಾರು 70 ವರ್ಷಗಳಿಂದ ಜಾರಿಯಲ್ಲಿದ್ದು, ರೈತರಿಗೆ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಪರಿಚಯ ಇರುವ ಅಂಶಗಳನ್ನು ಸಮಿತಿಯ ಗಮನಕ್ಕೆ ತರಲಾಯಿತು.

ರೈತರು ತಮ್ಮ ಉತ್ಪನ್ನಗಳನ್ನು ಹತ್ತಿರವಿರುವ ಅಥವಾ ರಾಜ್ಯದಲ್ಲಿನ ಇತರೆ ಮಾರುಕಟ್ಟೆಗಳಿಗೆ ಅಥವಾ ರಾಜ್ಯದ ಹೊರಗಡೆ ಮಾರುಕಟ್ಟೆಗಳಿಗೆ ಕೊಂಡ್ಯೊಯಬಹುದಾಗಿದೆ. ಸದರಿಯವರಿಗೆ ಲೈಸೆನ್ಸ್ ಅಗತ್ಯತೆ ಇರುವುದಿಲ್ಲ ಮತ್ತು ಮಾರಾಟ ಮಾಡುವ ಸಂದರ್ಭದಲ್ಲಿ ಪ್ರಾಂಗಣಗಳಲ್ಲಿ ಮಾರಾಟ ಮಾಡಬೇಕೆಂದು ನಿಬಂಧನೆ ಇರುತ್ತದೆ. ಹತ್ತಿರದಲ್ಲಿಯೇ ಮಾರುಕಟ್ಟೆ ವ್ಯವಸ್ಥೆ ಸಜ್ಜುಗೊಳಿಸಬೇಕೆನ್ನುವ ನಿಟ್ಟಿನಲ್ಲಿ ರಾಜ್ಯದಲ್ಲಿ ಈಗಾಗಲೇ 167 ಮುಖ್ಯ ಮಾರುಕಟ್ಟೆಗಳು ಹಾಗೂ 401 ಉಪ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ. ಮಾರುಕಟ್ಟೆಗಳಲ್ಲಿನ ಉತ್ಪನ್ನಗಳ ಆವಕ ಹಾಗೂ ಬೆಲೆ ಧಾರಣೆ ಪ್ರತಿ ದಿನ ದೊರೆಯಲು ಕೃಷಿ ಮಾರಾಟ ವಾಹಿನಿ ವೆಬ್‌ಸೈಟ್‌ನ್ನು 2001 ರಿಂದ ಪ್ರಾರಂಭಿಸಿದ್ದು, ಕೇಂದ್ರ ಸರ್ಕಾರದ ಆಗ್‌ಮಾರ್ಕ್ ನೆಟ್ ವೆಬ್‌ಸೈಟ್‌ಗೆ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ರೈತರು ಮಾರುಕಟ್ಟೆಗಳಲ್ಲಿನ ಧಾರಣೆ ಬಗ್ಗೆ ಮಾಹಿತಿ ಪಡೆದು ತಮ್ಮ ಉತ್ಪನ್ನದ ಮಾರಾಟದ ಬಗ್ಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಿದೆ.

ಕೃಷಿ ಮಾರಾಟ ನೀತಿ–2013ನ್ನು ರಾಜ್ಯ ಸರ್ಕಾರವು ಜಾರಿಗೊಳಿಸಿ ಏಕೀಕೃತ ಮಾರುಕಟ್ಟೆ ವೇದಿಕೆಗೆ ಅವಕಾಶ ಕಲ್ಪಿಸಿದೆ. ಕೇಂದ್ರ ಸರ್ಕಾರವು ಜಾರಿಗೊಳಿಸಿದ ಮಾದರಿ ಕಾಯ್ದೆ 2003 ರಲ್ಲಿನ ಪ್ರಮುಖ ಅಂಶಗಳನ್ನು 2007 ರಲ್ಲಿ ಕಾಯ್ದೆಯಲ್ಲಿ ಅಳವಡಿಸಿ ವಿಸ್ತೃತವಾಗಿ ನಿಯಮಾವಳಿಗಳನ್ನು 2008 ರಲ್ಲಿ ರಚನೆ ಮಾಡಿ ಜಾರಿಗೊಳಿಸಲಾಗಿದೆ. ರೈತರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಜೊತೆಗೆ ಕೃಷಿ ಮಾರಾಟ ನಿರ್ದೇಶಕರಿಂದ

ಲೈಸೆನ್ಸ್ ಪಡೆದ ಖಾಸಗಿ ಮಾರುಕಟ್ಟೆ, ನೇರ ಖರೀದಿ ಕೇಂದ್ರ, ರೈತ-ಗ್ರಾಹಕ ಮಾರುಕಟ್ಟೆ, ಕರಾರು ಕೃಷಿ ಮುಂತಾದ ಆಯ್ಕೆಗಳನ್ನು ಕಾಯ್ದೆಯಡಿ ನೀಡಲಾಗಿದೆ. ರಾಷ್ಟ್ರದಲ್ಲಿಯೇ ಕರ್ನಾಟಕ ರಾಜ್ಯವನ್ನು ಕೃಷಿ ಮಾರಾಟ ರಂಗದಲ್ಲಿ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿರುವ ರಾಜ್ಯವೆಂದು ಪರಿಗಣಿಸಿದ್ದು, ರಾಜ್ಯ ಸರ್ಕಾರದ ಕ್ರಮಗಳನ್ನು ಕೇಂದ್ರ ಸರ್ಕಾರವು ಇತರ ರಾಜ್ಯಗಳಲ್ಲಿ ಅಳವಡಿಸಲು ಸೂಚನೆಗಳನ್ನು ನೀಡಿರುತ್ತದೆ ಎಂಬ ಅಂಶಗಳನ್ನು ಮಾನ್ಯ ಸದಸ್ಯರ ಅವಗಾಹನೆಗೆ ಸಾದರಪಡಿಸಲಾಯಿತು.

ತಂತ್ರಜ್ಞಾನ ಮುಂದುವರೆದಿದ್ದು, ರೈತರು ಸಹ ಇದರಲ್ಲಿ ಪರಿಣಿತಿ ಇರುವುದರಿಂದ ಮಾರುಕಟ್ಟೆ ಪ್ರಾಂಗಣದ ಹೊರಗಡೆಯೂ ತಮ್ಮ ಹೊಲದ ಹತ್ತಿರ (ಫಾರಂ ಗೇಟ್) ಮಾರಾಟ ಮಾಡಲು ಇರುವ ಅವಕಾಶಗಳನ್ನು ಮುಂದುವರೆಸಬೇಕೆಂದು ಹಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಮಾರುಕಟ್ಟೆ ಸಮಿತಿಗಳ ಆದಾಯದಲ್ಲಿ ಕೊರತೆ ಉಂಟಾಗಿದೆ ಎನ್ನುವುದಕ್ಕಿಂತ ದೀರ್ಘ ಕಾಲದ ಅವಧಿಯಲ್ಲಿ ಕೇಂದ್ರ, ರಾಜ್ಯ ಮತ್ತು ಮಾರುಕಟ್ಟೆ ಸಮಿತಿಗಳ ನಿಧಿಯಿಂದ ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. 8584 ಎಕರೆ ಜಮೀನನ್ನು ಮಾರುಕಟ್ಟೆ ಸಮಿತಿಗಳು ಸ್ವಾಧೀನಪಡಿಸಿಕೊಂಡು ಈವರೆಗೆ ಅಂದಾಜು ರೂ.7,000 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದೆ. ಮಾರುಕಟ್ಟೆ ಪ್ರಾಂಗಣಗಳಲ್ಲಿ ಇರುವ ಸೌಕರ್ಯಗಳ ಸದುಪಯೋಗ ಮತ್ತು ರೈತರಿಗೆ ದೊರೆಯುವ ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಕೃಷಿ ಕಾನೂನುಗಳನ್ನು ಈಗಾಗಲೇ ಹಿಂಪಡೆದಿರುವುದರಿಂದ ರಾಜ್ಯದಲ್ಲಿ ರೈತ ಸಂಘಗಳು, ಹಲವಾರು ವರ್ತಕರ ಸಂಘಗಳು ಮತ್ತು ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿನ ತಜ್ಞರುಗಳು ಸರ್ಕಾರಕ್ಕೆ ಮನವಿ ಮಾಡಿರುವುದನ್ನು ಪರಿಗಣಿಸಿ ತಿದ್ದುಪಡಿಗೆ ಮುಂದಾಗಿರುವ ಅಂಶಗಳನ್ನು ಸಮಿತಿಯ ಅಧ್ಯಕ್ಷರು ವಿವರಿಸಿ ಇವುಗಳನ್ನು ಮಾನ್ಯ ಸದಸ್ಯರುಗಳು ಗಮನಿಸಬೇಕೆಂದು ವಿನಂತಿಸಿದರು.

ಕಾನೂನಿನ ಅಂಶಗಳ ಬಗ್ಗೆ ಮನವರಿಕೆ ಮಾಡಿಕೊಂಡ ನಂತರ ಕೆಲವು ಮಾರುಕಟ್ಟೆಗಳನ್ನು ಭೇಟಿ ನೀಡಿ ಮಾರುಕಟ್ಟೆಯಲ್ಲಿನ ರೈತರು, ವರ್ತಕರು ಹಾಗೂ ಸಂಬಂಧಿಸಿದವರೊಂದಿಗೆ ಸಂವಾದ ನಡೆಸಿ ಸೂಕ್ತವಾಗಿ ನಿರ್ಣಯಿಸಬಹುದೆಂದು ಹಲವಾರು ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಮಾನ್ಯ ಅಧ್ಯಕ್ಷರು ಅನುಮೋದಿಸಿದರು.

ಇದರ ಮೇರೆಗೆ ದಿ:30/10/2023 ರಂದು ರಾಷ್ಟ್ರದಲ್ಲಿಯೇ ಟಮೋಟೋ ಉತ್ಪನ್ನಕ್ಕೆ ಬೃಹತ್ ಮಾರುಕಟ್ಟೆಯಾದ **ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ** ಸಮಿತಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಮಾರುಕಟ್ಟೆಯಲ್ಲಿ ನಡೆಯುತ್ತಿದ್ದ ಹರಾಜು ಪ್ರಕ್ರಿಯೆ ವೀಕ್ಷಿಸಿ ಧಾರಣೆ ನಿಗಧಿಗೆ ಪರಿಗಣಿಸುವ ಅಂಶಗಳು ಮತ್ತು ಮಾರಾಟ ಮೌಲ್ಯ ಪಾವತಿ ಬಗ್ಗೆ ರೈತರು ಹಾಗೂ ವರ್ತಕರಿಂದ ಮಾಹಿತಿಯನ್ನು ಪರಿಶೀಲನಾ ಸಮಿತಿಯ ಸದಸ್ಯರು ಪಡೆದುಕೊಂಡರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಹಾಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಮಾರುಕಟ್ಟೆ ಹೊರಗಡೆ ನಡೆಯುವ ವಹಿವಾಟಿನ ಮೇಲೆ ಮಾರುಕಟ್ಟೆ ಸಮಿತಿಗೆ ಅಧಿಕಾರ ಇರುವುದಿಲ್ಲ. ರೈತರ ಹೊಲದ ಹತ್ತಿರ ಒಳ್ಳೆ ಬೆಲೆ ನೀಡುವುದಾಗಿ ಹೇಳಿ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿರುವ ಹಲವರು ಹಣ ಪಾವತಿ ಮಾಡದೆ ಬಾಕಿ ಇರುವುದು ಹಾಗೂ ಕೆಲವು ಪ್ರಕರಣಗಳ ಕುರಿತು ಪೋಲಿಸ್ ಠಾಣೆಗೆ ದೂರು ನೀಡಿರುವ ಅಂಶಗಳನ್ನು ರೈತ ಸಂಘದ ಪ್ರತಿನಿಧಿಗಳು ಸಭೆಯ ಗಮನಕ್ಕೆ ತಂದರು. ಲೈಸೆನ್ಸ್ ಪಡೆದ ವರ್ತಕರು, ಕಮೀಷನ್ ಏಜೆಂಟರು ಪ್ರಾಂಗಣಗಳಲ್ಲಿಯೇ ವ್ಯವಹರಿಸುವುದರಿಂದ ಹಾಗೂ ಹಲವಾರು ವರ್ಷಗಳಿಂದ ಕೃಷಿ ಮಾರುಕಟ್ಟೆ ವ್ಯವಸ್ಥೆಗೆ ರೈತರು ಹೊಂದಿಕೊಂಡಿರುವುದರಿಂದ ಸದರಿಯವರಿಗೆ ಹಣ ಪಾವತಿಯಲ್ಲಿ ಯಾವುದೇ ತೊಂದರೆಯಾಗಿರುವುದಿಲ್ಲ. ತೂಕ ಅಥವಾ ಇತರೆ ಯಾವುದೇ ವಿಚಾರಗಳಿಗೆ ವಿವಾದ ಉಂಟಾದಲ್ಲಿ ತಕ್ಷಣವೇ ಸಮಿತಿಯ ಕಾರ್ಯದರ್ಶಿಗಳು ಅಥವಾ ರೈತರಿಂದ ಚುನಾಯಿತರಾದ ಸಮಿತಿಯ ಅಧ್ಯಕ್ಷರಿಗೆ ದೂರು ನೀಡಿದಲ್ಲಿ ಪರಿಹಾರಕ್ಕೆ ಸಾಧ್ಯತೆ ಇರುವ ಅಂಶಗಳನ್ನು ಮತ್ತು ಈಗಾಗಲೇ ಪರಿಹಾರ ಪಡೆದಿರುವುದನ್ನು ಸಭೆಯ ಗಮನಕ್ಕೆ ತಂದು ಹಾಲಿ ಇರುವ ಕಾನೂನನ್ನು ಹಿಂತೆಗೆದುಕೊಳ್ಳಬೇಕು ಮತ್ತು ಇದರ ಪೂರ್ವದಲ್ಲಿದ್ದ ಮಾರುಕಟ್ಟೆ ಸಮಿತಿಗಳಿಗೆ ಅಧಿಕಾರವಿರುವ ಕಾನೂನನ್ನು ಜಾರಿಗೆ ತರಬೇಕು ಮತ್ತು ಅದನ್ನು ಬಲಪಡಿಸಲು ಯಾವುದೇ ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ವರ್ತಕರ ಪ್ರತಿನಿಧಿಗಳು ಮಾತನಾಡಿ ವ್ಯಾಪಾರ ವಹಿವಾಟಿನಲ್ಲಿ ಪಾರದರ್ಶಕತೆ ಹೊಂದಿರುವುದರಿಂದ ಕೋಲಾರ ತಾಲ್ಲೂಕು ಅಲ್ಲದೇ, ನೆರೆಯ ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ರಾಜ್ಯದಲ್ಲಿನ ಹಲವಾರು ಜಿಲ್ಲೆಗಳಿಂದ ಟಮೋಟೊ ಬೆಳೆಯುವ ರೈತರು ತಮ್ಮ ಉತ್ಪನ್ನಗಳನ್ನು ಕೋಲಾರಕ್ಕೆ ತರುತ್ತಿದ್ದು, ಅದನ್ನು ಮಾರಾಟ ಮಾಡಿಸುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದ್ದೇವೆ. ನೆರೆಯ ರಾಜ್ಯಗಳು ಹಾಗೂ ರಫ್ತು ಮಾಡಲು ಸಂಪರ್ಕ ಜಾಲವನ್ನು ತಾವು ಹೊಂದಿದ್ದು, ಮಾರುಕಟ್ಟೆ ಬೆಳೆಯಲು ಸಾಧ್ಯವಾಗಿದೆ. ಆದ್ದರಿಂದ, ಹಾಲಿ ಇರುವ ಕಾನೂನನ್ನು ತಿದ್ದುಪಡಿ ಮಾಡಿ ಈ ಮೊದಲು ಇದ್ದ ಕಾನೂನನ್ನು ಜಾರಿಗೊಳಿಸಬೇಕೆಂದು ಮನವಿ ಮಾಡಿದರು. ಇದಕ್ಕೆ ಪೂರಕವಾಗಿ ಹಮಾಲರು, ಪ್ರಗತಿ ಪರ ರೈತರು ಧ್ವನಿಗೂಡಿಸಿದರು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವವರು ಮಾರುಕಟ್ಟೆ ಅಭಿವೃದ್ಧಿ ಮತ್ತು ರೈತರ ಹಿತಾಸಕ್ತಿಗೆ ಈ ಮೊದಲಿನ ಕಾನೂನು ಪೂರಕವಾಗಿದ್ದು, ಮಾರುಕಟ್ಟೆ ಪ್ರಾಂಗಣಗಳಲ್ಲಿ ಸ್ಪರ್ಧಾತ್ಮಕ ಧಾರಣೆ ದೊರೆಯುತ್ತದೆ. ಹಣ ಪಾವತಿಯಲ್ಲಿ ಮೋಸ ಇರುವುದಿಲ್ಲ ಮತ್ತು ಯಾವುದೇ ವಿವಾದಗಳು ಉಂಟಾದಲ್ಲಿ ತಕ್ಷಣವೇ ವರ್ತಕರು, ರೈತರನ್ನು ಕರೆದು ಮಾತನಾಡಿ ಸಮಸ್ಯೆ ಬಗೆಹರಿಸಿರುವುದರ ವಿವರಗಳನ್ನು ನೀಡಿ ಇದರಿಂದಾಗಿ ಮಾರುಕಟ್ಟೆ ಅಭಿವೃದ್ಧಿಯಾಗಿದ್ದು, ಈಗಿರುವ ಮಾರುಕಟ್ಟೆ ಟಮೋಟೋ ಆವಕಕ್ಕೆ

ಪೂರಕವಾಗಿಲ್ಲದೇ ಇದ್ದು, ಹೆಚ್ಚುವರಿಯಾಗಿ ಹೊಸ ಮಾರುಕಟ್ಟೆಯನ್ನು ಸ್ಥಾಪಿಸಬೇಕೆಂದು ಮನವಿ ಮಾಡಿದರು. ಹೊಸ ಮಾರುಕಟ್ಟೆ ಸ್ಥಾಪನೆ ಬಗ್ಗೆ ರೈತರು, ರೈತ ಸಂಘಗಳು, ವರ್ತಕರು ಹಾಗೂ ಇತರೆ ಭಾಗೀದಾರರು ಆದಷ್ಟು ಶೀಘ್ರದಲ್ಲಿ ಮಾರುಕಟ್ಟೆ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿದರು. ಮಾರುಕಟ್ಟೆ ಭಾಗೀದಾರರೊಂದಿಗೆ ಮಾನ್ಯ ಸದಸ್ಯರುಗಳು ಸಂವಾದ ನಡೆಸಿ ಅವರ ಅಭಿಪ್ರಾಯಗಳನ್ನು ಆಲಿಸಿ ತದನಂತರದಲ್ಲಿ ಸಮಿತಿಯ ಸದಸ್ಯರೊಂದಿಗೆ ವಿಚಾರ ವಿನಿಮಯವನ್ನು ಮಾಡಿಕೊಳ್ಳಲಾಯಿತು.

ದಿ:22/11/2023 ರಂದು ಶಿವಮೊಗ್ಗ **ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ** ಪ್ರಾಂಗಣಕ್ಕೆ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳು ಭೇಟಿ ನೀಡಿ ಪ್ರಾಂಗಣದಲ್ಲಿನ ಪ್ರಮುಖ ಚಟುವಟಿಕೆಗಳನ್ನು ವೀಕ್ಷಿಸಿದರು. ಅಡಿಕೆ ವರ್ತಕರು ಯಶಸ್ವಿಯಾಗಿ ನಡೆಸುತ್ತಿರುವ ಸಹಕಾರಿ ಬ್ಯಾಂಕ್ ಇಲ್ಲಿನ ಕಾರ್ಯಚಟುವಟಿಕೆಗಳು ಹಾಗೂ ವರ್ತಕರಿಗೆ ಅದರಿಂದಾಗುತ್ತಿರುವ ಅನುಕೂಲತೆ, ಸದರಿ ಬ್ಯಾಂಕಿನ ಆರ್ಥಿಕ ಸ್ಥಿತಿಯ ಸುಭದ್ರತೆ ಮುಂತಾದ ಅಂಶಗಳನ್ನು ಬ್ಯಾಂಕಿನ ಆಡಳಿತ ಮಂಡಳಿಯವರು ವಿವರಿಸಿದರು.

ಸಹಕಾರ ಕ್ಷೇತ್ರದಲ್ಲಿ ಅಡಿಕೆ ಉತ್ಪನ್ನಕ್ಕೆ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಿರುವ ಮ್ಯಾಂಕೋಸ್ ಮತ್ತು ಕ್ಯಾಂಪ್ಕೋ ಸಂಸ್ಥೆಗಳು ಪ್ರಾಂಗಣದಲ್ಲಿ ಹೊಂದಿರುವ ಕಟ್ಟಡ, ಅಡಿಕೆ ಸ್ವಚ್ಛತೆ ಮತ್ತು ವರ್ಗೀಕರಣಕ್ಕೆ ಇರುವ ವ್ಯವಸ್ಥೆಗಳು ಹಾಗೂ ಸದರಿಯವರು ನಡೆಸುತ್ತಿರುವ ಟೆಂಡರ್ ಪ್ರಕ್ರಿಯೆ ಮುಂತಾದವುಗಳನ್ನು ಶಿವಮೊಗ್ಗ ಜಿಲ್ಲಾಧಿಕಾರಿಯವರು ಹಾಗೂ ಸದರಿ ಸಂಸ್ಥೆಗಳ ಪದಾಧಿಕಾರಿಗಳು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಇಲಾಖಾ ಅಧಿಕಾರಿಗಳಿಗೆ ವಿವರಣೆ ಒದಗಿಸಿದರು.

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಇ-ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದು, ಅದಕ್ಕಾಗಿ ವಿಶೇಷವಾಗಿ ವ್ಯವಸ್ಥೆ ಮಾಡಿರುವ ಟೆಂಡರ್ ಹಾಲ್‌ಗೆ ಭೇಟಿ ನೀಡಿ ಟೆಂಡರ್ ಪ್ರಕ್ರಿಯೆ ಬಗ್ಗೆ ವಿವರ, ವರ್ತಕರು ಟೆಂಡರ್‌ನಲ್ಲಿ ಭಾಗವಹಿಸಬಹುದಾದ ಸಮಯ ಮತ್ತು ಟೆಂಡರ್ ಡಿಕ್ಲರೇಷನ್ ನಡೆಯುವ ಬಗ್ಗೆ ಸಮಿತಿಯ ಸಿಬ್ಬಂದಿಯವರು ಪ್ರಾತ್ಯಕ್ಷಿಕೆ ನೀಡಿದರು.

ಅಡಿಕೆ ವರ್ತಕರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಅಡಿಕೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದರು. ಪ್ರಮುಖವಾಗಿ ಅಡಿಕೆ ಉತ್ಪನ್ನವು ಹೆಚ್ಚು ಮೌಲ್ಯಯುತ ಸರಕ್ಕಾಗಿದ್ದು, ಮಾರುಕಟ್ಟೆ ಶುಲ್ಕ ದರ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತದ ಸೆಸ್ ಪಾವತಿಸಬೇಕಾಗುತ್ತದೆ. ಪ್ರಾಂಗಣದಲ್ಲಿನ ವರ್ತಕರು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು, ಪ್ರಾಂಗಣದ ಹೊರಗಡೆ ನಡೆಯುವ ವಹಿವಾಟಿಗೆ ಇಂತಹ ಯಾವುದೇ ಜವಾಬ್ದಾರಿಗಳು ಇಲ್ಲದೇ ಇರುವುದರಿಂದ ವ್ಯಾಪಾರ ವಹಿವಾಟಿನ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂಬುದನ್ನು ಅಂಕಿ-ಅಂಶಗಳೊಂದಿಗೆ ವಿವರಿಸಿದರು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಈ ಮೊದಲಿನ ಕಾನೂನಿನಂತೆ ನಿರ್ವಹಿಸಲು ಸರ್ಕಾರವು ಕೈಗೊಂಡಿರುವ ಕ್ರಮವನ್ನು ಬೆಂಬಲಿಸುವುದಾಗಿ ತಿಳಿಸಿದರು. ಒಣದ್ರಾಕ್ಷಿ ಉತ್ಪನ್ನಕ್ಕೆ ಶೇ.0.10

ರಷ್ಟು ಮಾರುಕಟ್ಟೆ ಶುಲ್ಕ ಆಕರಿಸುತ್ತಿದ್ದು, ಹೆಚ್ಚಿನ ಮೌಲ್ಯದ ಅಡಿಕೆ ಉತ್ಪನ್ನಕ್ಕೆ ಹಾಲಿ ಇರುವ ಶೇ.0.60 ರ ಬದಲಾಗಿ ಕಡಿಮೆ ದರ ನಿಗಧಿಪಡಿಸಿದಲ್ಲಿ ಮಾರುಕಟ್ಟೆ ಸಮಿತಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ ಮತ್ತು ಪ್ರಾಂಗಣದ ಹೊರಗಡೆ ಮತ್ತು ಒಳಗಿನ ವಹಿವಾಟುಗಳಿಗೆ ವ್ಯತ್ಯಾಸ ಆಗದೆ ಕ್ರಮಬದ್ಧ ವ್ಯಾಪಾರಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಸಮಿತಿಗೆ ನಿವೇದಿಸಿದರು.

ಮುಂದುವರೆದು, ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಮಿತಿಯು ರಿಯಾಯಿತಿ ದರದಲ್ಲಿ ನಿವೇಶನ ಒದಗಿಸಿದ್ದು, ಹಂಚಿಕೆದಾರರೇ ಕಟ್ಟಡ ನಿರ್ಮಾಣ ಮಾಡಿಕೊಂಡಿರುತ್ತಾರೆ. ದುಡಿಮೆ ಬಂಡವಾಳ ಹೊಂದಿಸಿಕೊಳ್ಳಲು ಸದರಿ ಕಟ್ಟಡವನ್ನು ಬ್ಯಾಂಕ್‌ಗಳಲ್ಲಿ ಅಡಮಾನ ಮಾಡುವುದಕ್ಕೆ ಸಂಬಂಧಿಸಿದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಸದರಿ ಕಟ್ಟಡದ ಮೇಲೆ ತಮ್ಮ ಪ್ರಥಮ ಹಕ್ಕು ಇರುವುದಾಗಿ ಪ್ರಮಾಣ ಪತ್ರ ನೀಡುವುದರಿಂದ ಯಾವುದೇ ಬ್ಯಾಂಕ್‌ಗಳು ಸಾಲ ಮಂಜೂರು ಮಾಡುತ್ತಿರುವುದಿಲ್ಲ. ಹೆಚ್ಚಿನ ಮೌಲ್ಯದ ಸರಕಾಗಿರುವ ಅಡಿಕೆಗೆ ಇದಕ್ಕೆ ದುಡಿಮೆಯ ಬಂಡವಾಳ ಅಗಾಧವಾಗಿ ಬೇಕಾಗಿದ್ದು, ಹೊಸದಾಗಿ ವ್ಯಾಪಾರ ವಹಿವಾಟು ನಡೆಸಲು ಬರುವ ಯುವಕರು ಮತ್ತು ಹೊಸ ವ್ಯಾಪಾರಸ್ಥರಿಗೆ ದುಡಿಮೆ ಬಂಡವಾಳ ಹೊಂದಿಸಲು ಸಾಧ್ಯವಾಗದೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ವರ್ತಕರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣ ಯೋಗ್ಯ ಬೆಲೆ ರೈತರಿಗೆ ದೊರೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, ದುಡಿಮೆ ಬಂಡವಾಳ ಬ್ಯಾಂಕುಗಳಿಂದ ಪಡೆಯಲು ಸರ್ಕಾರವು ಸೂಕ್ತವಾಗಿ ಅವಕಾಶ ನೀಡಬೇಕೆಂದು ಅಡಿಕೆ ವರ್ತಕರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ವಿನಂತಿಸಿದರು. ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಶಿವಮೊಗ್ಗ ಸಮಿತಿ ವರ್ತಕರು ಸಲ್ಲಿಸಿದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ಪರಿಶೀಲಿಸಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಸ್ಥಳೀಯ ಪ್ರಾಧಿಕಾರವಾಗಿದ್ದು, ಯಾವ ಉದ್ದೇಶಕ್ಕಾಗಿ ಸ್ಥಾಪಿತವಾಗಿದೆಯೋ ಅಂತಹ ಉದ್ದೇಶ ಜಾರಿಗೆ ಪೂರಕವಾಗಿ ಕ್ರಮ ವಹಿಸಬೇಕಿದ್ದು, ಟ್ರಸ್ಟ್ ಸ್ವರೂಪ ಹೊಂದಿದ್ದು, ಯಾವುದೇ ಆಸ್ತಿಯನ್ನು ಮಾರಾಟ ಮಾಡುವಂತಿಲ್ಲ ಎಂದು ವಿಭಾಗೀಯ ಪೀಠ ತೀರ್ಪು ನೀಡಿದ್ದು, ಈ ಕಾರಣದಿಂದಾಗಿ 10 ವರ್ಷಗಳ ಲೀಸ್ ಕಂ ಸೇಲ್ ಆಧಾರದ ಮೇಲೆ ನಿವೇಶನ / ಕಟ್ಟಡ ಹಂಚಿಕೆ ಮಾಡುತ್ತಿದ್ದು, ಸದರಿ ಲೀಸ್ ಅವಧಿ ಮುಗಿದ ಮೇಲೆ ಷರತ್ತು ಬದ್ಧ ಕ್ರಯ ಪತ್ರವನ್ನು ಮಾಡಿಕೊಡಲಾಗುತ್ತಿದೆ. ಸಮಿತಿಯು ಆಸ್ತಿಯ ಒಡೆತನವನ್ನು ಹೊಂದಿರುತ್ತದೆ ಎಂಬ ಕಾನೂನಿನ ಅಂಶವನ್ನು ಸಮಿತಿಯ ಗಮನಕ್ಕೆ ಇಲಾಖೆಯ ಅಧಿಕಾರಿಗಳು ಪ್ರಸ್ತುತಪಡಿಸಿದರು.

ಹಾಲಿ ಇರುವ ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ಸ್ಥಳಾವಕಾಶ ಇಲ್ಲದೇ ಇದ್ದು, ವ್ಯಾಪಾರ ವಹಿವಾಟು ವೃದ್ಧಿಯಾಗುತ್ತಿರುವುದರಿಂದ ಹೊಸಬರಿಗೆ ಹಾಗೂ ಯುವಜನಕ್ಕೆ ವ್ಯಾಪಾರಸ್ಥರಾಗಿ ಕಾರ್ಯನಿರ್ವಹಿಸಲು ಹೊಸ ಮಾರುಕಟ್ಟೆಯನ್ನು ಸ್ಥಾಪಿಸಬೇಕೆಂದು ಪದಾಧಿಕಾರಿಗಳು ಕೋರಿದರು.

ಮಾರುಕಟ್ಟೆ ಪ್ರಾಂಗಣಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದ್ದು, ಸಮಿತಿಯು ಸ್ಥಳೀಯ ಪ್ರಾಧಿಕಾರವಾಗಿದ್ದಾಗ್ಯೂ ನಗರಸಭೆ ಇವರು ಪ್ರಾಂಗಣದಲ್ಲಿನ ಕಟ್ಟಡಗಳಿಗೆ ವಾಣಿಜ್ಯ ವರ್ಗೀಕರಣ ಮಾಡಿ ಕರ ವಿಧಿಸುತ್ತಿರುವುದು ಹಾಗೂ ಕರ ದುಬಾರಿಯಾಗಿರುವುದರ ಬಗ್ಗೆ ಸಮಿತಿಯ ಗಮನಕ್ಕೆ ತಂದು ಮಾರುಕಟ್ಟೆ ಸಮಿತಿ ಹಾಗೂ ಕೈಗಾರಿಕಾ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವರ್ಗೀಕರಣ ಮಾಡಿ ಕರದ ದರ ನಿರ್ಧರಿಸಬೇಕೆಂದು ಇದರಿಂದಾಗಿ ಪ್ರಾಂಗಣದಲ್ಲಿ ವ್ಯವಹರಿಸುವ ವರ್ತಕರಿಗೆ ಅನುಕೂಲವಾಗುತ್ತದೆ. ಮುನಿಸಿಪಲ್ ಕಾಯ್ದೆಗೆ ಸೂಕ್ತವಾಗಿ ತಿದ್ದುಪಡಿ ತಂದು ರಿಯಾಯಿತಿ ಕೊಡಿಸಿಕೊಡಬೇಕೆಂದು ತಾವು ಆಸ್ತಿ ಕರ ಪಾವತಿಗೆ ಬದ್ದರಿರುವುದಾಗಿ ತಿಳಿಸಿರುತ್ತಾರೆ. ಶಿವಮೊಗ್ಗ ಜಿಲ್ಲಾಧಿಕಾರಿಯವರು ಆಸ್ತಿ ಕರ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಪರಿಗಣಿಸುವ ಅಂಶಗಳ ಬಗ್ಗೆ ವಿವರಣೆ ನೀಡಿ ನಗರಸಭೆಯು ರಸ್ತೆ, ವಿದ್ಯುತ್ ದೀಪ, ಚರಂಡಿ ವ್ಯವಸ್ಥೆ ಮುಂತಾದ ಮೂಲಭೂತ ಸೌಕರ್ಯಗಳನ್ನು ನಗರದಲ್ಲಿ ಒದಗಿಸುತ್ತಿದ್ದು, ಅವುಗಳನ್ನು ಎಲ್ಲರೂ ಉಪಯೋಗಿಸಿ ಕೊಳ್ಳುತ್ತಿರುವುದರಿಂದ ನಗರಸಭೆಯು ವಿಧಿಸುತ್ತಿರುವ ಆಸ್ತಿ ಕರ ಸೂಕ್ತವಿರುತ್ತದೆ ಎಂಬ ಅಂಶವನ್ನು ಸಮಿತಿಯ ಗಮನಕ್ಕೆ ತಂದರು.

ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕಾಯ್ದೆಯಲ್ಲಿ ಅವಕಾಶ ನೀಡಿದ್ದು, ಸದರಿಯವರು ಅಧಿಸೂಚಿತ ಪ್ರದೇಶದಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಳ್ಳುತ್ತಾರೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಯಾವುದೇ ತೆರಿಗೆ ಪಡೆಯುವುದಿಲ್ಲ ಮತ್ತು ಸೌಲಭ್ಯ ನೀಡುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸಮಿತಿಯ ಗಮನಕ್ಕೆ ತಂದರು.

ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರುಗಳು ವಿಷಯದ ಬಗ್ಗೆ ಚರ್ಚಿಸಿ ಸರ್ಕಾರದ ಮಟ್ಟದಲ್ಲಿ ನಗರಾಭಿವೃದ್ಧಿ ಇಲಾಖೆಯೊಂದಿಗೆ ಸಭೆ ಜರುಗಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿದರು.

ತದನಂತರದಲ್ಲಿ, ಜಿಲ್ಲಾಧಿಕಾರಿಯವರ ಕಛೇರಿಯಲ್ಲಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಎಲ್ಲಾ ಭಾಗೀದಾರರು, ರೈತ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕಮೀಷನ್ ಏಜೆಂಟರು, ವರ್ತಕರು, ಅಕ್ಕಿ ಗಿರಣಿದಾರರ ಸಂಘದ ಪದಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾಜಿ ಅಧ್ಯಕ್ಷರು ಹಾಗೂ ಸದಸ್ಯರುಗಳು, ಪ್ರಗತಿ ಪರ ರೈತರು, ಹಮಾಲರು ಹಾಗೂ ತೂಕದವರ ಸಂಘದ ಪದಾಧಿಕಾರಿಗಳು, ಮೆಕ್ಕೆಜೋಳ ಉತ್ಪನ್ನ ವಹಿವಾಟಿನ ವ್ಯಾಪಾರಸ್ಥರ ಪ್ರತಿನಿಧಿಗಳು ಹಾಗೂ ತೀರ್ಥಹಳ್ಳಿ ಕ್ಷೇತ್ರದ ಮಾನ್ಯ ಶಾಸಕರು ಭಾಗವಹಿಸಿರುತ್ತಾರೆ.

ರೈತ ಸಂಘದ ಅಧ್ಯಕ್ಷರು ಹಾಗೂ ಹಲವು ಪದಾಧಿಕಾರಿಗಳು ಈ ಹಿಂದೆ ಇದ್ದಂತಹ ಕಾನೂನು ಹಾಗೂ ಅದರಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅಧಿಕಾರ ನೀಡುವುದಕ್ಕಾಗಿ ಸರ್ಕಾರ ತಂದಿರುವ ಮಸೂದೆಯನ್ನು

ಬೆಂಬಲಿಸುವುದಾಗಿ ತಿಳಿಸಿದರು. ಸರ್ಕಾರ ರಚನೆ ಪೂರ್ವದಲ್ಲಿ ಪ್ರಣಾಳಿಕೆ ಸಿದ್ಧಪಡಿಸುವ ಹಂತದಲ್ಲಿ ರಾಜ್ಯ ರೈತ ಸಂಘದ ಪದಾಧಿಕಾರಿಗಳ ಅಭಿಪ್ರಾಯವನ್ನು ಪಡೆದಿದ್ದು, ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕೆಂದು ಮನವಿ ನೀಡಿದ್ದು, ಪ್ರಸ್ತುತ ಸರ್ಕಾರವು ಅದರ ಜಾರಿಗೆ ಮುಂದಾಗಿರುವುದು ಸೂಕ್ತವಿದೆ ಎಂದು ತಿಳಿಸಿದರು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಎಲ್ಲವೂ ಸರಿ ಇದೆ ಎಂದು ಹೇಳುವುದಿಲ್ಲ. ಆದರೆ, ವ್ಯಾಪಾರ ವಹಿವಾಟು ಒಂದೇ ಪ್ರಾಂಗಣದಲ್ಲಿ ನಡೆಯುವುದರಿಂದ ಮತ್ತು ರೈತರು ತಮ್ಮ ಉತ್ಪನ್ನಗಳನ್ನು ಪ್ರಾಂಗಣಗಳಲ್ಲಿ ಮಾರಾಟ ಮಾಡುವುದರಿಂದ ಸ್ಪರ್ಧಾತ್ಮಕ ಧಾರಣೆ ದೊರೆಯಲು ಇರುವ ಅವಕಾಶಗಳು ಮತ್ತು ಯಾವುದೇ ವಿವಾದ ಉಂಟಾದಲ್ಲಿ ಅದನ್ನು ಬಗೆಹರಿಸಲು ಇರುವ ವ್ಯವಸ್ಥೆ ಮುಂತಾದವುಗಳು ರೈತರಿಗೆ ಅನುಕೂಲಕರವಾಗಿದೆ. ತೋಟದ ಹತ್ತಿರ ಖರೀದಿ ಮಾಡುವವರು ಒಂದು ಅಥವಾ ಎರಡು ಪ್ರಕರಣಗಳಲ್ಲಿ ಹೆಚ್ಚಿನ ಬೆಲೆ ನೀಡಬಹುದಾಗಿರುತ್ತದೆ. ಪ್ರಾಂಗಣಗಳಲ್ಲಿನ ವ್ಯಾಪಾರ ಪ್ರಮಾಣ ಕಡಿಮೆಯಾದ ನಂತರದಲ್ಲಿ ಸದರಿಯವರು ಶೋಷಣೆ ಮಾಡುತ್ತಾರೆ. ಇದು Multi National Company ಗಳ ಪಾಲಿಸಿಯಾಗಿರುತ್ತದೆ. ರೈತರು ತಾವು ಯಾವ ಬೆಳೆಯನ್ನು ಬೆಳೆಯಬೇಕು ಮತ್ತು ಯಾರಿಗೆ ಮಾರಾಟ ಮಾಡಬೇಕೆಂಬ ವಿಚಾರದಲ್ಲಿ ಸ್ವತಂತ್ರ ಹೊಂದಿರಬೇಕು. ಅಡಿಕೆ ಉತ್ಪನ್ನದಲ್ಲಿ ಸಹಕಾರ ಸಂಘಗಳು ಹಾಗೂ ಶಿವಮೊಗ್ಗ ಸಮಿತಿ ಉತ್ತಮವಾಗಿ ವ್ಯವಸ್ಥೆ ಮಾಡಿದ್ದು, ಇತರೆ ಅಡಿಕೆ ಮಾರುಕಟ್ಟೆಗಳು ಇಲ್ಲಿನ ಬೆಲೆ ಅನುಸರಿಸುತ್ತವೆ. ಆದ್ದರಿಂದ, ಹಾಲಿ ಇರುವ ಕಾನೂನನ್ನು ರದ್ದುಪಡಿಸಿ ಪ್ರಸ್ತಾಪಿತ ತಿದ್ದುಪಡಿ ಕಾನೂನನ್ನು ಜಾರಿಗೆ ತರಬೇಕು ಮತ್ತು ಎಪಿಎಂಸಿ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರವು ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ರೈತ ಉತ್ಪಾದಕ ಸಂಸ್ಥೆಗಳಿಗೆ ಪ್ರಾಂಗಣಗಳಲ್ಲಿ ಸ್ಥಳಾವಕಾಶ ನೀಡಿ ಪ್ರೋತ್ಸಾಹಿಸಬೇಕು. ಅಡಮಾನ ಸಾಲ ಯೋಜನೆ ಜಾರಿಯಲ್ಲಿದ್ದು, ಅದರ ಮಿತಿಯನ್ನು ಹೆಚ್ಚಿಸಬೇಕು. ಈ ರೀತಿಯಾಗಿ ಕ್ರಮ ಜರುಗಿಸುವುದರಿಂದ ಹೆಚ್ಚಿನ ಸಂಖ್ಯೆಯ ರೈತರಿಗೆ ಅನುಕೂಲವಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಕಮೀಷನ್ ಏಜೆಂಟರ ವ್ಯಾಪಾರ ವಹಿವಾಟಿನ ವೆಚ್ಚಗಳು ಏರಿಕೆಯಾಗುತ್ತಿದ್ದು, ಕಮೀಷನ್ ದರವನ್ನು ಕಾಯ್ದೆಯಲ್ಲಿ ನಿಗಧಿಪಡಿಸಿದ್ದು, ಅದನ್ನು ಪರಿಷ್ಕರಿಸದೆ ಇರುವುದರಿಂದ ಕಮೀಷನ್ ಏಜೆಂಟರು ತಮ್ಮ ಜವಾಬ್ದಾರಿ ನಿರ್ವಹಣೆಗೆ ಕಷ್ಟಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರವು ಗಮನಹರಿಸಬೇಕೆಂದು ಮನವಿ ಮಾಡಿದರು. ವರ್ತಕರು ಈ ಮೊದಲು ಪ್ರಸ್ತಾಪಿಸಿದ ಅಂಶಗಳನ್ನು ಪುನ: ಸಮಿತಿಯ ಗಮನಕ್ಕೆ ತಂದರು. ಹಮಾಲರು ಹಾಗೂ ತೂಕದವರು ಪ್ರಾಂಗಣಗಳಲ್ಲಿ ಆವಕ ಕಡಿಮೆಯಾಗಿರುವುದರಿಂದ ತಮ್ಮ ಜೀವನ ನಿರ್ವಹಣೆಗೆ ಆರ್ಥಿಕವಾಗಿ ಕಷ್ಟಸಾಧ್ಯವಾಗಿದ್ದು, ಮೆಕ್ಕೆಜೋಳ ಉತ್ಪನ್ನ ಸೇರಿದಂತೆ ಎಲ್ಲಾ ಉತ್ಪನ್ನಗಳು ಪ್ರಾಂಗಣಗಳಲ್ಲಿಯೇ ವಹಿವಾಟು ನಡೆಯುವಂತೆ ವ್ಯವಸ್ಥೆಗೊಳಿಸಬೇಕು ಮತ್ತು ಎಪಿಎಂಸಿ ವ್ಯವಸ್ಥೆ ಮುಂದುವರೆಸಲು ಸರ್ಕಾರವು ತಿದ್ದುಪಡಿ

ಕಾನೂನನ್ನು ಜಾರಿಗೆ ತರಬೇಕೆಂದು ಮನವಿ ಮಾಡಿದರು. ಜಿ.ಎಸ್.ಟಿ ಕಾಯ್ದೆಯಲ್ಲಿ ಆನ್ ಲೈನ್ ಮೂಲಕ ಎಲ್ಲಾ ಮಾಹಿತಿ ನಮೂದು ಮಾಡಬೇಕಿದ್ದು, ಪ್ರತಿ ತಿಂಗಳಿಗೆ ರಿಟರ್ನ್ ಗಳನ್ನು ಸಲ್ಲಿಸಬೇಕು, ಮೊದಲು ತೆರಿಗೆ ಪಾವತಿಸಿ ನಂತರದಲ್ಲಿ ಇನ್‌ಪುಟ್ ಟ್ಯಾಕ್ಸ್ ಬರುತ್ತದೆ. ಪಾರದರ್ಶಕವಾಗಿ ವ್ಯವಸ್ಥೆ ಇದೆ. ಅದೇ ರೀತಿ ಮಾರುಕಟ್ಟೆ ಸಮಿತಿಯಲ್ಲಿಯೂ ಮಾಡಬೇಕೆಂದು ಕೋರಿದರು.

ಶಿವಮೊಗ್ಗ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷರು ಹಾಗೂ ಪ್ರತಿನಿಧಿಗಳು ಮಾತನಾಡಿ 2020 ರಿಂದ ಜಾರಿಯಾದ ಕಾನೂನಿನ ಮೇರೆಗೆ ಮುಕ್ತವಾಗಿ ಮಾರಾಟ ನಡೆದಿದ್ದರಿಂದ ರೈತರಿಗೆ ಹೆಚ್ಚು ಲಾಭ ಸಿಕ್ಕಿದೆ. ರೈತರು ತಮ್ಮ ಉತ್ಪನ್ನಗಳನ್ನು ನಿಯಂತ್ರಿತ ಮಾರುಕಟ್ಟೆ ಒಳಗೂ ಹಾಗೂ ಹೊರಗೂ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಆಯ್ಕೆ ಅವರದ್ದಾಗಿದೆ. ಕೇಂದ್ರ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ಪದ್ಧತಿಯಲ್ಲಿ ಪ್ರಾಂಗಣದ ಹೊರಗಡೆ ನಡೆಯುವ ವ್ಯಾಪಾರ ವಹಿವಾಟಿನ ಮಾಹಿತಿ ಲಭ್ಯವಿದೆ. ರೈತರ ಕೃಷಿ ಉತ್ಪನ್ನಗಳಿಗೆ ಹೆಚ್ಚುವರಿ ಲಾಭ ಸಿಗುತ್ತಿರುವ ವಿಷಯವನ್ನು ಪರಿಶೀಲಿಸಬಹುದಾಗಿದೆ. ಆನ್ ಲೈನ್ ಪದ್ಧತಿಯಿಂದ ಹೊರ ಬಂದ ರೈತರು ದಲ್ಲಾಳಿಗಳ ಶೋಷಣೆಯಿಂದ ಮುಕ್ತಿ ಪಡೆದಿದ್ದಾರೆ. ಒಂದೇ ಮಾರುಕಟ್ಟೆಯಲ್ಲಿ ನಿಗಧಿತ ದಲ್ಲಾಲಿಗಳ ಮೂಲಕ ವ್ಯವಹರಿಸುವುದಕ್ಕಿಂತ ದೇಶವ್ಯಾಪಿ ಮಾರುಕಟ್ಟೆಯಲ್ಲಿ ರೈತರು ಸ್ವತಂತ್ರವಾಗಿ ವ್ಯವಹರಿಸುವ ಅವರ ಹಕ್ಕನ್ನು ಮೊಟುಕುಗೊಳಿಸಬಾರದು. ತೂಕದ ವಿಷಯದಲ್ಲಿ ಮೋಸ ನಡೆಯದಂತೆ ರೈತರು ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ಸ್ವತಂತ್ರರಿರುತ್ತಾರೆ. ಮಾರುಕಟ್ಟೆ ಪ್ರಾಂಗಣಗಳಲ್ಲಿ ಕೃಷಿ ಉತ್ಪನ್ನಗಳನ್ನು ಇಳಿಸಲು, ಶೇಖರಿಸಲು, ತೇವಾಂಶ ಇರುವ ಧಾನ್ಯಗಳನ್ನು ತುರ್ತಾಗಿ ಸಂಸ್ಕರಿಸಿ ಕಾಪಾಡಲು ಯಾವುದೇ ಸೌಲಭ್ಯಗಳು ಇರುವುದಿಲ್ಲ. ಇಲಾಖೆ ಒದಗಿಸಲಾಗದ ಸವಲತ್ತುಗಳು ಬಹುತೇಕ ಅಕ್ಕಿ ಗಿರಣಿಗಳಲ್ಲಿ ಲಭ್ಯವಿರುತ್ತದೆ. ಮಾರುಕಟ್ಟೆ ಮೇಲೆ ಅವಲಂಬಿತರಾಗದೆ ತಮ್ಮ ಜೀವನೋಪಾಯವನ್ನು ರೂಪಿಸಿಕೊಂಡಿದ್ದಾರೆ. ಕಾರ್ಮಿಕರು ಲಭ್ಯವಿಲ್ಲದೆ ಉತ್ತರ ಭಾರತದ ಕಾರ್ಮಿಕರು ಬಂದು ಕೆಲಸ ಮಾಡುತ್ತಿದ್ದಾರೆ. ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆ ರೈತರಿಗೆ ಲಭಿಸುತ್ತಿದೆ. ಕಲಂ 117 ರಲ್ಲಿ ಪ್ರಸ್ತಾಪಿಸಿರುವ ಶಿಕ್ಷೆಗಳನ್ನು ವಿಧಿಸುವುದು ಘೋರ ಅಪರಾಧಗಳಿಗೆ ಮಾತ್ರ. ಇಂತಹ ಧೋರಣೆಯನ್ನು ಸರ್ಕಾರವು ಕೈಬಿಡಬೇಕು. ಅಧಿಕಾರಿಗಳ ಶೋಷಣೆಗೆ ರೈತರು, ವ್ಯಾಪಾರಿಗಳು, ಕೈಗಾರಿಕೋದ್ಯಮಗಳ ಸುಲಿಗೆಗೆ ಅವಕಾಶವಾಗುತ್ತದೆ. ಲೈಸೆನ್ಸ್ ರಾಜ್ ಸ್ಥಾಪಿಸುವುದಾಗುತ್ತದೆ. ಆದ್ದರಿಂದ, ರಾಜ್ಯದ ಬಹುತೇಕ ಕೃಷಿ ಉತ್ಪನ್ನ ಮಾರುಕಟ್ಟೆಗಳು ಅಕ್ಕಿ ಗಿರಣಿಗಳಿಗೆ ಯಾವುದೇ ಸೌಲಭ್ಯ ಒದಗಿಸಲು ವಿಫಲರಾಗಿರುವ ಹಿನ್ನೆಲೆಯಲ್ಲಿ ಅಕ್ಕಿ ಉತ್ಪನ್ನಗಳನ್ನು ಕಾಯ್ದೆಯಿಂದ ಹೊರತುಪಡಿಸಿ ಅಕ್ಕಿ ಗಿರಣಿಗಳ ಉದ್ಯಮ ಸರಾಗವಾಗಿ ನಡೆಯಲು ಅನುವು ಮಾಡಿಕೊಡಬೇಕೆಂದು ಸಮಿತಿಗೆ ಮನವಿ ಮಾಡಿರುತ್ತಾರೆ.

ಮೆಕ್ಕೆಜೋಳ ವರ್ತಕ ಸಂಘದ ಪದಾಧಿಕಾರಿಗಳು ಮಾತನಾಡಿ ತಮ್ಮ ಸಂಘ ಕಾರ್ಯನಿರ್ವಹಣೆಗೆ ನಿವೇಶನ ಮಂಜೂರಾತಿಗೆ ಕೋರಿದ್ದು, ಆದಷ್ಟು ಶೀಘ್ರದಲ್ಲಿ

ಮಂಜೂರು ಮಾಡಬೇಕೆಂದು ಮತ್ತು ಮೆಕ್ಕೆಜೋಳ ಉತ್ಪನ್ನ ಮಾರುಕಟ್ಟೆ ಒಳಗಡೆ ಮತ್ತು ಮಾರುಕಟ್ಟೆ ಹೊರಗಡೆ ವ್ಯವಹಾರ ಮಾಡಿದವರಿಗೆ ಪ್ರತಿ ರೂ.100/-ಕ್ಕೆ ರೂ.0.50 ಪೈಸೆಯಂತೆ ಮಾರುಕಟ್ಟೆ ಶುಲ್ಕ ಕಟ್ಟುವ ಹಾಗೆ ಮಾಡಿದಲ್ಲಿ ಸರ್ಕಾರಕ್ಕೆ ಹತ್ತುಪಟ್ಟು ಆದಾಯ ಬರುತ್ತದೆ. ಜಿ.ಎಸ್.ಟಿ ನೋಂದಣಿ ಕಡ್ಡಾಯವಿದ್ದು, ಅಲ್ಲಿನ ಮಾಹಿತಿ ಆಧಾರದ ಮೇಲೆ ಖರೀದಿಯ ಒಟ್ಟು ಮೊತ್ತದ ಮೇಲೆ ಶೇ.0.50 ಪೈಸೆಯಂತೆ ವಸೂಲಿ ಮಾಡುವುದು ಸುಲಭವಿರುತ್ತದೆ. ಜಿ.ಎಸ್.ಟಿ ಮತ್ತು ಪ್ಯಾನ್ ಲಿಂಕ್ ಇರುವುದರಿಂದ ಈ ಕಾರ್ಯ ಸಾಧ್ಯವಿದೆ ಎಂದು ತಿಳಿಸಿದರು.

ದಿನಸಿ ವರ್ತಕರ ಸಂಘ ಇವರು ಹಲವಾರು ಬೆಳೆಗಳ ಮೇಲೆ ಶುಲ್ಕ ಪ್ರಮಾಣ ಹೆಚ್ಚಿಗೆ ಇದ್ದು ಅದನ್ನು ಕಡಿಮೆಗೊಳಿಸುವುದರಿಂದ ಪ್ರಾಂಗಣದ ಒಳಗಡೆ ವ್ಯಾಪಾರ ಜರುಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಸ್ಪರ್ಧಾತ್ಮಕ ಧಾರಣೆ ದೊರೆಯುತ್ತದೆ. ಲೈಸೆನ್ಸ್ ಪಡೆದುಕೊಳ್ಳಲು ಹಲವಾರು ದಿನ ಆಗುತ್ತಿದ್ದು, ಕಡಿಮೆ ಅವಧಿಯಲ್ಲಿ ನೀಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕಟ್ಟಡಗಳಲ್ಲಿ ಜಾಸ್ತಿ ಮಳಿಗೆಗಳು ಇದ್ದು ಎಲ್ಲಾ ಮಳಿಗೆಗಳಿಗೆ ಪ್ರತ್ಯೇಕ ಲೈಸೆನ್ಸ್ ನೀಡುವ ವ್ಯವಸ್ಥೆ ಆದಲ್ಲಿ, ಎಪಿಎಂಸಿ ಹೊರ ಭಾಗದಲ್ಲಿ ವ್ಯಾಪಾರ ಮಾಡುವ ವರ್ತಕರು ಒಳಗೆ ವ್ಯಾಪಾರ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಈ ಬಗ್ಗೆ ಕ್ರಮಕ್ಕಾಗಿ ಕೋರಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾಜಿ ಅಧ್ಯಕ್ಷರು ಹಾಗೂ ಸದಸ್ಯರುಗಳು ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಬಹಳ ಪುರಾತನವಾಗಿದ್ದು, ನೂರಾರು ಕೋಟಿಗಳನ್ನು ವ್ಯಯ ಮಾಡಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ರೈತರಿಗೆ ಮಾರುಕಟ್ಟೆ ಪ್ರಾಂಗಣ ವ್ಯವಸ್ಥೆ ಪರಿಚಿತವಿದ್ದು, ಸದರಿಯವರಿಗೆ ಯಾವುದೇ ಮಾರಾಟದಲ್ಲಿ ತೊಂದರೆ ಉಂಟಾದಲ್ಲಿ ಸಮಿತಿಯು ಬಗೆಹರಿಸಿರುವ ಉದಾಹರಣೆಗಳು ಸಾಕಷ್ಟು ಇರುವುದರಿಂದ ಮತ್ತು ರೈತರ ಸಂಸ್ಥೆಯಾಗಿರುವುದರಿಂದ ಅವುಗಳಿಗೆ ಬಲ ತುಂಬುವ ಕಾನೂನು ಜಾರಿಗೊಳಿಸಬೇಕೆಂದು ಕೋರಿದರು. ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸಬೇಕು ಮತ್ತು ಹಲವು ಅಧಿಕಾರಗಳನ್ನು ನೀಡಬೇಕು, ಪ್ರಮುಖವಾಗಿ ಬಾಡಿಗೆ ರೂಪದಲ್ಲಿ ಕಟ್ಟಡಗಳನ್ನು ನೀಡುವಾಗ ಸ್ಥಳೀಯ ಪರಿಸ್ಥಿತಿ ಗಮನದಲ್ಲಿಟ್ಟು ಸೂಕ್ತವಾಗಿ ಬಾಡಿಗೆ ನಿಗಧಿಪಡಿಸಿ ನೀಡುವುದಕ್ಕೆ ಮತ್ತು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಈಗಿರುವ ಮಿತಿಯನ್ನು ಹೆಚ್ಚಿಸಿ ಅಧಿಕಾರ ನೀಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಹಾಜರಿದ್ದ ತೀರ್ಥಹಳ್ಳಿ ಶಾಸಕರು ಮಾತನಾಡಿ ಈಗಾಗಲೇ ವಿಧಾನ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಮಾರುಕಟ್ಟೆ ಪ್ರಾಂಗಣಗಳಲ್ಲಿ ವಹಿವಾಟು ಜೊತೆಗೆ ಅಲ್ಲಿ ರೈತರಿಗೆ ಉತ್ತಮ ಬೆಲೆ ಮತ್ತು ಸರ್ಕಾರಕ್ಕೆ ತೆರಿಗೆ ವಂಚನೆ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಈಗ ಬಹುತೇಕ ರೈತರ ಮಕ್ಕಳು ವಿದ್ಯಾವಂತರಾಗಿದ್ದು, ಅವರಿಗೆ ಮಾರುಕಟ್ಟೆ ಪರಿಸ್ಥಿತಿ ಬಗ್ಗೆ ಮಾಹಿತಿ ಇರುವುದರಿಂದ ಮನೆ ಬಾಗಿಲಿಗೆ

ಖರೀದಿದಾರರು ಬಂದು ಖರೀದಿಸಿದಲ್ಲಿ ಅಂತಹ ಖರೀದಿ ಚಟುವಟಿಕೆಗೆ ಸಹ ಅವಕಾಶ ನೀಡಬೇಕು. ಇದರಿಂದ ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ವಾತಂತ್ರ್ಯ ಇರುತ್ತದೆ ಎಂಬ ಅಂಶವನ್ನು ತಿಳಿಸಿ ಸರ್ಕಾರ ಈ ಬಗ್ಗೆ ಎಲ್ಲರ ಹಿತ ಗಮನದಲ್ಲಿಟ್ಟು ಕ್ರಮ ವಹಿಸಬೇಕೆಂದು ತಿಳಿಸಿದರು.

ಪ್ರಗತಿ ಪರ ರೈತರು ಮಾರುಕಟ್ಟೆ ಪ್ರಾಂಗಣ ಒಳಗೆ ಮತ್ತು ಹೊರಗಡೆ ಅವಕಾಶ ನೀಡುವುದರಿಂದ ತೆರಿಗೆ ಹಾಗೂ ಸೆಸ್ ನಲ್ಲಿ ವ್ಯತ್ಯಾಸವಾಗಿ ವ್ಯಾಪಾರಸ್ಥರಿಗೆ ಅನಾನೂಕೂಲವಾಗುತ್ತದೆ ಮತ್ತು ವಂಚನೆಗೆ ಪ್ರೋತ್ಸಾಹವಾಗುತ್ತದೆ. ಆದ್ದರಿಂದ, ಮಾರುಕಟ್ಟೆ ಪ್ರಾಂಗಣಗಳಲ್ಲಿ ವ್ಯಾಪಾರ ವಹಿವಾಟು ನಡೆಸುವುದಕ್ಕೆ ವ್ಯವಸ್ಥೆಯಾಗಬೇಕು ಮತ್ತು ಪ್ರಾಂಗಣದ ಹೊರಗಡೆ ಅನಧಿಕೃತವಾಗಿ ನಡೆಯುವ ವಹಿವಾಟಿನ ನಿಯಂತ್ರಣಕ್ಕೆ squad ರಚಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸಲಹೆಯನ್ನು ನೀಡಿದರು.

ಮಾನ್ಯ ಸಮಿತಿ ಸದಸ್ಯರುಗಳಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಡಿ.ಎಸ್.ಅರುಣ್, ಶ್ರೀ ಎಂ.ಎಲ್.ಅನಿಲ್ ಕುಮಾರ್ ಇವರುಗಳು ಹಾಲಿ ಇರುವ ಕಾನೂನಿನಲ್ಲಿನ ಅಂಶಗಳು ಮತ್ತು ಅದರ ಉದ್ದೇಶ ಹಾಗೂ ಪ್ರಸ್ತಾಪಿತ ತಿದ್ದುಪಡಿ ಕಾನೂನಿನ ಬಗ್ಗೆ ತಮ್ಮ ಅನಿಸಿಕೆಗಳನ್ನು ಸಭೆಗೆ ಹಂಚಿಕೊಂಡರು.

ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತಪಡಿಸಿದ ಸಲಹೆ, ಸೂಚನೆಗಳು ಮತ್ತು ಅಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸಮಿತಿ ಸ್ವೀಕರಿಸುತ್ತದೆ. ತಿದ್ದುಪಡಿಗೆ ಸಂಬಂಧಿಸಿದಂತೆ ತಾವು ನೀಡಿರುವ ಸಲಹೆ, ಸೂಚನೆಗಳು ಪರಿಶೀಲಿಸಲಾಗುತ್ತದೆ ಮತ್ತು ಇದಲ್ಲದೆ ಮಾರುಕಟ್ಟೆ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ನೀಡಿರುವ ಇತರೆ ಸಲಹೆ, ಸೂಚನೆಗಳನ್ನು ಸಹ ಸರ್ಕಾರವು ಪರಿಶೀಲಿಸುತ್ತದೆ ಮತ್ತು ಮಾರುಕಟ್ಟೆ ಭಾಗೀದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಸಮಿತಿ ಸೂಕ್ತವಾಗಿ ಕ್ರಮ ವಹಿಸುತ್ತದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ದಿನಾಂಕ:03/01/2024 ರಂದು ಪರಿಶೀಲನಾ ಸಮಿತಿಯು ರಾಜ್ಯದಲ್ಲಿಯ ಬೇಳೆಕಾಳುಗಳು, ಹತ್ತಿ, ಭತ್ತ ಮತ್ತು ಇತರೆ ಉತ್ಪನ್ನಗಳ ವಹಿವಾಟಿಗೆ ಪ್ರಮುಖ ಮಾರುಕಟ್ಟೆಗಳಾಗಿರುವ **ಕಲಬುರುಗಿ ಹಾಗೂ ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ** ಭೇಟಿ ನೀಡಿ ಪ್ರಾಂಗಣಗಳ ಪರಿವೀಕ್ಷಣೆ ಹಾಗೂ ಮಾರುಕಟ್ಟೆ ಭಾಗೀದಾರರೊಂದಿಗೆ ಸಂವಾದ ನಡೆಸಿತು.

**ಕಲಬುರುಗಿ ಮಾರುಕಟ್ಟೆಯಲ್ಲಿ** ಮಾನ್ಯ ಸ್ಥಳೀಯ ಶಾಸಕರುಗಳು ಹಾಗೂ ವಿವಿಧ ಉತ್ಪನ್ನಗಳ ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಜೊತೆಗೆ ಕಾಯ್ದೆ ತಿದ್ದುಪಡಿ ಸಂಬಂಧ ಚರ್ಚೆ ನಡೆಸಲಾಯಿತು. ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರುವುದು ಅಗತ್ಯವಿದೆ ಎಂದು ಮತ್ತು ಹಾಲಿ ಇರುವ ಮಾರುಕಟ್ಟೆ ಶುಲ್ಕ ಪ್ರಮಾಣ ಶೇ.0.60 ಮುಂದುವರೆಸಬೇಕೆಂದು ವರ್ತಕರು, ರೈತರು ಅಭಿಪ್ರಾಯ ನೀಡಿದರು. ಪ್ರಾಂಗಣದ ಹೊರಗಡೆ ನಡೆಯುತ್ತಿರುವ

ವಹಿವಾಟಿನ ಮೇಲೆ ಯಾವುದೇ ನಿಯಂತ್ರಣವಿಲ್ಲದೆ ಇದ್ದು, ವಿಧೇಯಕದ ಮೂಲಕ ತಿದ್ದುಪಡಿಗೆ ಪ್ರಸ್ತಾಪಿಸಿರುವುದನ್ನು ಜಾರಿಗೆ ತಂದು ನಿಯಂತ್ರಣಕ್ಕೆ ಒಳಪಡಿಸಬೇಕಾಗುತ್ತದೆ ಎಂಬ ಅಂಶವನ್ನು ಪ್ರಸ್ತುತಪಡಿಸಿದರು. ಹಮಾಲರು ಮಾರುಕಟ್ಟೆ ಪ್ರಾಂಗಣದಲ್ಲಿ ಚಟುವಟಿಕೆಗಳು ನಡೆಯುವುದರಿಂದ ತಮಗೆ ಅನುಕೂಲವಾಗುತ್ತದೆ ಹಾಗೂ ಇಲಾಖೆಯಿಂದ ಹಮಾಲರಿಗಾಗಿ ಇರುವ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಮನವಿ ಮಾಡಿದರು. ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳ ಬಗ್ಗೆ ಕೃಷಿ ಮಾರಾಟ ನಿರ್ದೇಶಕರು ಮಾಹಿತಿ ನೀಡಿದರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಹಲವಾರು ಯೋಜನೆಗಳನ್ನು ಜಾರಿಗೆ ತರುವ ಬಗ್ಗೆ ಸಮಿತಿಯ ಸದಸ್ಯರುಗಳು ಅಭಿಪ್ರಾಯ ನೀಡಿದ್ದು, ಅವುಗಳನ್ನು ಪರಿಶೀಲಿಸಲಾಗುವುದೆಂದು ಸಮಿತಿಯ ಅಧ್ಯಕ್ಷರು ತಿಳಿಸಿ ಸಮಿತಿಯ ಮುಂದೆ ಸಲ್ಲಿಕೆಯಾಗಿರುವ ಅಭಿಪ್ರಾಯಗಳು, ಸಲಹೆ, ಸೂಚನೆಗಳ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ** ರೈತರ ಉತ್ಪನ್ನಗಳಿಗೆ ಪ್ರಾಥಮಿಕ ಮಾರುಕಟ್ಟೆಯಾಗಿದ್ದು, ರೈತರು, ವರ್ತಕರು, ದಲ್ಲಾಲರು, ಹಮಾಲರು ಹಾಗೂ ಅಕ್ಕಿ ಗಿರಣಿದಾರರ ಪದಾಧಿಕಾರಿಗಳೊಂದಿಗೆ ಸಂವಾದ ನಡೆಸಲಾಯಿತು. ರೈತರು ಮಾರುಕಟ್ಟೆ ಪ್ರಾಂಗಣದಲ್ಲಿ ವಹಿವಾಟು ನಡೆಯುವುದರಿಂದ ತಮ್ಮ ಉತ್ಪನ್ನಗಳ ಮೌಲ್ಯ ಪಡೆಯಲು ಭದ್ರತೆ ಇರುವುದಾಗಿ ಹಾಗೂ ರಾಯಚೂರು ಸಮಿತಿಯಲ್ಲಿ ಉತ್ಪನ್ನ ಮಾರಾಟದ ತಕ್ಷಣ ಹಣ ಪಾವತಿಯಾಗುತ್ತಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲವೆಂದು ತಿಳಿಸಿದರು.

ವರ್ತಕರು ಹಾಗೂ ದಲ್ಲಾಲರು, ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ವಹಿವಾಟಿಗೆ ಮಾರುಕಟ್ಟೆ ಶುಲ್ಕ ವಿಧಿಸುತ್ತಿದ್ದು, ಪ್ರಾಂಗಣದ ಹೊರಗಡೆ ಲೈಸೆನ್ಸ್ ಇಲ್ಲದೆ ಇರುವವರು ನಡೆಯುವ ವಹಿವಾಟು ಹಾಗೂ ಲೈಸೆನ್ಸ್ ಹೊಂದಿರುವವರು ನಡೆಸುವ ವಹಿವಾಟಿಗೆ ಯಾವುದೇ ಶುಲ್ಕ ಇಲ್ಲದ ಕಾರಣ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರುತ್ತದೆ. ಪ್ರಾಂಗಣದ ಒಳಗೆ ಮತ್ತು ಹೊರಗೆ ಲೈಸೆನ್ಸ್ ದಾರರು ವಹಿವಾಟು ನಡೆಸಲು ಅವಕಾಶ ನೀಡಿದ್ದು ಮಾರುಕಟ್ಟೆ ಶುಲ್ಕ ಆಕರಣೆ ಮಾಡಬಹುದಾಗಿದೆ. ಲೈಸೆನ್ಸ್ ಇಲ್ಲದೆ ಇರುವವರು ಹಾಗೂ ಕೆಲವು ಮಧ್ಯವರ್ತಿಗಳು ರೈತರಿಗೆ ಪ್ರಾಂಗಣದ ಹೊರಗಡೆ ಖರೀದಿ ಸಂದರ್ಭದಲ್ಲಿ ಹಣ ಪಾವತಿ ಮಾಡದೆ ವಂಚನೆಯಾಗಿರುತ್ತದೆ. ಆದರೆ, ಪ್ರಾಂಗಣದಲ್ಲಿನ ಯಾವುದೇ ವರ್ತಕ/ ದಲ್ಲಾಲರಿಂದ, ಇಂತಹ ಘಟನೆಗಳು ಜರುಗಿರುವುದಿಲ್ಲ ಎಂದು ತಿಳಿಸಿದರು. ರೈತರು ಸಹ ಇದಕ್ಕೆ ಸಹಮತಿ ವ್ಯಕ್ತಪಡಿಸಿ ತಿದ್ದುಪಡಿ ಪ್ರಸ್ತಾವವನ್ನು ಈ ಎಲ್ಲರೂ ಸಮರ್ಥಿಸಿದರು. ಹಾಲಿ ಇರುವ ಮಾರುಕಟ್ಟೆ ಶುಲ್ಕ ಸೂಕ್ತವಿದ್ದು, ಅದನ್ನು ಹೆಚ್ಚಿಸಬಾರದು ಮತ್ತು ಆಕರಣೆಯಾಗುವ ಶುಲ್ಕ ಪ್ರಾಂಗಣದಲ್ಲಿನ ಸೌಲಭ್ಯ ವರ್ಧನೆಗೆ ಕ್ರಮ ವಹಿಸಬೇಕೆಂದು ಮತ್ತು ಸರ್ಕಾರವು ಪೂರಕವಾಗಿ ಅನುದಾನ ಬಿಡುಗಡೆ ಮಾಡಿ ಸಹಕರಿಸಬೇಕೆಂದು ಮನವಿ ಮಾಡಿದರು. ರಾಯಚೂರು ಮಾರುಕಟ್ಟೆ ಜಿಲ್ಲೆಯ ಎಲ್ಲಾ ರೈತರಿಗೆ ಮಾರುಕಟ್ಟೆಯಾಗಿದ್ದು, ನೆರೆಯ ರಾಜ್ಯಗಳಿಂದಲೂ ಸಹ ರೈತರು ಉತ್ಪನ್ನಗಳನ್ನು

ತರುತ್ತಿದ್ದು, ವರ್ತಕರು ಸಹ ಮಾರಾಟ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದು, ಇ-ಟೆಂಡರ್ ಪ್ರಕ್ರಿಯೆ ಯಶಸ್ವಿಯಾಗಿ ನಡೆಯುತ್ತಿರುವುದರಿಂದ ಒಳ್ಳೆ ಧಾರಣೆ ರೈತರಿಗೆ ದೊರೆಯುತ್ತಿದೆ ಎಂಬ ಮಾಹಿತಿಯನ್ನು ಸಭೆಯೊಂದಿಗೆ ಹಂಚಿಕೊಂಡರು.

ಅಕ್ಕಿ ಗಿರಣಿದಾರರು ರೈತರಿಂದ ಭತ್ತ ಉತ್ಪನ್ನವನ್ನು ಖರೀದಿಸುತ್ತಿದ್ದು, ಸಂಸ್ಕರಣೆ ನಂತರದಲ್ಲಿ ಅಕ್ಕಿಯನ್ನು ಮಾರಾಟ ಮಾಡುತ್ತಿರುವುದಾಗಿ ಅಕ್ಕಿ ಗಿರಣಿದಾರರಿಂದ ರೈತರಿಗೆ ಯಾವುದೇ ಅನಾನೂಕೂಲವಾಗಿರುವುದಿಲ್ಲ. ಕಾನೂನು ಜಾರಿಕೋಶ ಇದ್ದಂತಹ ಸಂದರ್ಭದಲ್ಲಿ ಅಕ್ಕಿ ಗಿರಣಿ ವಹಿವಾಟುಗಳಿಗೆ ತೊಂದರೆಯಾಗಿರುವುದನ್ನು ಪ್ರಸ್ತಾಪಿಸಿ ಜಿ.ಎಸ್.ಟಿ ಕಾಯ್ದೆ ಜಾರಿಯಲ್ಲಿದ್ದು, ತಮ್ಮ ಮಾಸಿಕ ವಹಿವಾಟನ್ನು ಜಿ.ಎಸ್.ಟಿ ಪ್ರಾಧಿಕಾರಕ್ಕೆ ನಮೂದು ಮಾಡುತ್ತಿರುವುದರಿಂದ ಅದನ್ನು ಪರಿಗಣಿಸಬೇಕು. ಮಾರುಕಟ್ಟೆ ಪ್ರಾಂಗಣದ ಹೊರಗಡೆ ಅಕ್ಕಿ ಗಿರಣಿಗಳು ಇದ್ದು, ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರಾಂಗಣದ ಯಾವುದೇ ಸೌಲಭ್ಯ ಪಡೆಯದೆ ಇರುವುದರಿಂದ ತಮ್ಮನ್ನು ಕಾಯ್ದೆ ವ್ಯಾಪ್ತಿಯಿಂದ ಹೊರತುಪಡಿಸುವುದು ಮತ್ತು ಮಾರುಕಟ್ಟೆ ಶುಲ್ಕ ವಿಧಿಸದೆ ವಹಿವಾಟು ನಡೆಸಲು ಅವಕಾಶ ನೀಡಬೇಕೆಂಬುದು ಅಕ್ಕಿ ಗಿರಣಿದಾರರ ಸಂಘವು ಅಭಿಪ್ರಾಯ ನೀಡಿದರು. ಸಿರುಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಹಲವಾರು ಗೋದಾಮುಗಳನ್ನು ನಿರ್ಮಿಸಿದ್ದು, ಅವುಗಳನ್ನು ಹಂಚಿಕೆ ಮಾಡದೆ ದುಸ್ಥಿತಿಯಲ್ಲಿದ್ದು, ಅಕ್ಕಿ ಗಿರಣಿದಾರರಿಂದ ಸಂಗ್ರಹವಾದ ಮಾರುಕಟ್ಟೆ ಶುಲ್ಕವನ್ನು ಪ್ರಾಂಗಣದ ಅಭಿವೃದ್ಧಿ ಹೆಸರಿನಲ್ಲಿ ವ್ಯರ್ಥಗೊಳಿಸಿರುವುದು ಪ್ರಸ್ತಾಪಿಸಿ ಮಾರುಕಟ್ಟೆ ಶುಲ್ಕವನ್ನು ಉಪಯುಕ್ತ ಸೌಲಭ್ಯಗಳ ನೀಡುವಿಕೆಗೆ ಬಳಸಬೇಕೆಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಅಕ್ಕಿ ಗಿರಣಿದಾರರು ನೇರವಾಗಿ ರೈತರಿಂದ ಖರೀದಿಸದೆ ಬ್ರೋಕರ್ ಅಥವಾ ಮಧ್ಯವರ್ತಿಗಳ ಮೂಲಕ ಭತ್ತ ಖರೀದಿ ಮಾಡುತ್ತಿರುವ ವಿಷಯವನ್ನು ಸಮಿತಿಯ ಗಮನಕ್ಕೆ ತಂದರು.

ಹಮಾಲರು ಮಾರುಕಟ್ಟೆ ಪ್ರಾಂಗಣದಲ್ಲಿ ವಹಿವಾಟು ನಡೆಯುವುದರಿಂದ ಹಮಾಲರು ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ಜೀವನೋಪಾಯಕ್ಕಾಗಿ ಸಾಧ್ಯವಾಗುವ ಅಂಶವನ್ನು ಸಮಿತಿಯ ಗಮನಕ್ಕೆ ತಂದು ತಿದ್ದುಪಡಿ ಪ್ರಸ್ತಾವವನ್ನು ಸಮರ್ಥಿಸಿದರು.

ರೈತ ಸಂಘದ ಪದಾಧಿಕಾರಿಗಳು ಮಾತನಾಡಿ ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಆಯ್ಕೆ ಇರಬೇಕು. ಪ್ರಾಂಗಣದಲ್ಲಿನ ಸೌಲಭ್ಯಗಳು ಹಾಗೂ ಧಾರಣೆ ಮತ್ತು ತಮ್ಮ ಹೊಲದಲ್ಲಿಯೇ ಮಾರಾಟ ಮಾಡುವಾಗ ದೊರೆಯುವ ಧಾರಣೆ ಬಗ್ಗೆ ಪ್ರಸ್ತುತ ರೈತರಿಗೆ ತಿಳುವಳಿಕೆ ಇದ್ದು, ಹಾಲಿ ಇರುವ ಕಾಯ್ದೆ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ತರಕಾರಿ ಉತ್ಪನ್ನಗಳ ವಹಿವಾಟುದಾರರು ಸ್ಥಳೀಯವಾಗಿ ಸಮಿತಿಯಲ್ಲಿ ಇರುವ ಸಮಸ್ಯೆಗಳ ಕೊರತೆ ಬಗ್ಗೆ ಪ್ರಸ್ತಾಪಿಸಿದ್ದು, ಅವುಗಳನ್ನು ಪರಿಶೀಲಿಸಿ ಬಗೆಹರಿಸುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು.

ಸಮಿತಿಯ ಹಲವು ಸದಸ್ಯರುಗಳು ಸಮಿತಿ ಈವರೆಗೆ ನಡೆಸಿರುವ ಮಾರುಕಟ್ಟೆಗಳ ಅಧ್ಯಯನ ಮತ್ತು ಸ್ವೀಕರಿಸಿರುವ ಸಲಹೆ-ಸೂಚನೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದವರ ಗಮನಕ್ಕೆ ತಂದು ಮಾರುಕಟ್ಟೆ ಚಟುವಟಿಕೆ ಮತ್ತು ಧಾರಣೆ ದೊರೆಯುತ್ತಿರುವ ಬಗ್ಗೆ ರೈತರು, ವರ್ತಕರು, ಹಮಾಲರು, ಅಕ್ಕಿ ಗಿರಣಿದಾರರು ಇವರುಗಳೊಂದಿಗೆ ಸಂವಾದ ನಡೆಸಿ ಮಾಹಿತಿ ಪಡೆದುಕೊಳ್ಳಲಾಯಿತು.

ಪರಿಶೀಲನಾ ಸಮಿತಿಯು ಈವರೆಗೆ ಭೇಟಿ ನೀಡಿದ ವಿವಿಧ ಮಾರುಕಟ್ಟೆ ಸಮಿತಿಗಳು ಮತ್ತು ಅಲ್ಲಿನ ಮಾರುಕಟ್ಟೆ ಭಾಗೀದಾರರೊಂದಿಗೆ ನಡೆದ ಸಂವಾದ ಮತ್ತು ಸ್ವೀಕರಿಸಿದ ಸಲಹೆ-ಸೂಚನೆಗಳನ್ನು ಪರಿಶೀಲಿಸಿ ರೈತರಿಗೆ ಹಾಗೂ ಮಾರುಕಟ್ಟೆ ಭಾಗೀದಾರರಿಗೆ ಅನುಕೂಲಕರವಾಗುವ ರೀತಿಯಲ್ಲಿ ಶಿಫಾರಸ್ಸುಗಳನ್ನು ಮಾಡಲಿದೆ ಎಂಬುದಾಗಿ ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಮಿತಿಯ ಮುಂದೆ ಸಲ್ಲಿಕೆಯಾದ ಅಭಿಪ್ರಾಯಗಳು, ಮನವಿಗಳು ಮತ್ತು ಪ್ರಾಂಗಣ ಭೇಟಿ, ವೀಕ್ಷಣೆ ಹಾಗೂ ಮಾರುಕಟ್ಟೆ ಭಾಗೀದಾರರೊಂದಿಗಿನ ಸಂವಾದ ಇವುಗಳನ್ನು ಆಧರಿಸಿ ಕೆಳಕಂಡಂತೆ ಒಟ್ಟಾರೆ ಮಾರುಕಟ್ಟೆ ವ್ಯವಸ್ಥೆ ಸುಧಾರಣೆಯಾಗಲು ಶಿಫಾರಸ್ಸುಗಳನ್ನು ಮಾಡಿ ವಿಧೇಯಕವನ್ನು ಅನುಮೋದಿಸುವ ಬಗ್ಗೆ ಸಹಮತ ವ್ಯಕ್ತಪಡಿಸಲಾಯಿತು.

******

# ವಿಧೇಯಕ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳು

1. ರೈತರು ಉತ್ಪಾದನೆ, ಮಾರಾಟ ಮುಂತಾದವುಗಳಲ್ಲಿ ಸಂಘಟಿತರಾಗಿ ಸ್ವ-ಸಾಮರ್ಥ್ಯದ ಮೇರೆಗೆ ಕಾರ್ಯನಿರ್ವಹಿಸಿದಲ್ಲಿ ಅಭ್ಯುದಯ ಸಾಧ್ಯತೆ ಹಿನ್ನೆಲೆಯಲ್ಲಿ ರೈತ ಉತ್ಪಾದಕ ಸಂಘಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾರಾಟ ಪ್ರಕ್ರಿಯೆಯಲ್ಲಿ ಹೆಚ್ಚಿಗೆ ತೊಡಗಿಸಿಕೊಳ್ಳುವಂತೆ ಕ್ರಮ ವಹಿಸುವುದು ಮತ್ತು ಮಾರುಕಟ್ಟೆ ಶುಲ್ಕದಲ್ಲಿ ವಿನಾಯಿತಿ ನೀಡಿ ಪ್ರೋತ್ಸಾಹಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತಂತ್ರಜ್ಞಾನವನ್ನು ಉಪಯೋಗಿಸಿಕೊಳ್ಳುವುದು ಅಗತ್ಯವಿದೆ. ಮಾರುಕಟ್ಟೆ ಪ್ರಾಂಗಣಗಳಲ್ಲಿ **ರೈತ ಮಾರಾಟಗಾರರು, ದಲ್ಲಾಳಿ, ಕಮೀಷನ್ ಏಜೆಂಟ್, ರಫ್ತುದಾರ, ಜಿನ್ನರ್, ಆಮದುದಾರ, ಪ್ರೆಸ್ಸರ್, ಸಂಸ್ಕರಣಗಾರ, ದಾಸ್ತಾನುಗಾರ, ವರ್ತಕರು, ಹಮಾಲರು, ರೈತ-ಉತ್ಪಾದಕ ಸಂಸ್ಥೆ, ಸಹಕಾರ ಮಾರಾಟ ಸಂಘಗಳು, ಅಂತರ್ ರಾಜ್ಯ ವಹಿವಾಟುದಾರರು ಮುಂತಾದ** ಮಾರುಕಟ್ಟೆ ಭಾಗೀದಾರರಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ನಡೆಯುವುದಕ್ಕೆ ಪೂರಕವಾಗಿ ವ್ಯವಸ್ಥೆಯನ್ನು ಕಲ್ಪಿಸುವುದು. ಇದರಿಂದ ಪಾರದರ್ಶಕತೆ ಮತ್ತು ಕ್ಷಿಪ್ರಗತಿಯಲ್ಲಿ ವ್ಯವಹಾರಗಳು ನಡೆಯಲು ಅವಕಾಶ ಇರುತ್ತದೆ ಎಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಹಲವಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆರ್ಥಿಕವಾಗಿ ಸದೃಢವಾಗಿಲ್ಲದೆ ಇರುವುದು ಗಮನಿಸಿದ್ದು, ಅವುಗಳನ್ನು ಸದೃಢಗೊಳಿಸಲು ಮತ್ತು ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು **ಮಾರುಕಟ್ಟೆ ಸಮಿತಿಗಳ ಆದಾಯ ಶೇ.5ಕ್ಕೆ ಮೀರದಂತೆ ವಂತಿಗೆ ನೀಡಿ** ಪ್ರತ್ಯೇಕವಾಗಿ ನಿಧಿ ಸ್ಥಾಪನೆ, ಆರ್ಥಿಕ ಸಹಾಯ ಮುಂತಾದ ಕ್ರಮಗಳನ್ನು ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಹಲವಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ವಿವಿಧ ಕಾರಣಗಳಿಂದಾಗಿ **(ಹಳೆ ಮಾರುಕಟ್ಟೆ, ಬೆಳೆ ಪದ್ಧತಿ ಬದಲಾವಣೆಯಿಂದ ನಿಷ್ಕ್ರೀಯವಾಗಿರುವುದು)** ವ್ಯಾಪಾರ ವಹಿವಾಟು ನಡೆಯದೆ ಪ್ರಾಂಗಣಗಳಲ್ಲಿ ಚಟುವಟಿಕೆ ಸ್ಥಗಿತಗೊಂಡಿರುತ್ತವೆ. ಅಂತಹ ಮಾರುಕಟ್ಟೆಗಳನ್ನು ಗುರುತಿಸಿ ಪ್ರಾಂಗಣದ ಸೌಲಭ್ಯ ಸದುಪಯೋಗವಾಗುವಂತೆ ಮಾರುಕಟ್ಟೆ ಪುನರ್ ರಚನೆ, ಸಂಸ್ಕರಣೆ ಚಟುವಟಿಕೆಗಳಿಗೆ ಅವಕಾಶ, ರಫ್ತು ಚಟುವಟಿಕೆಗಳಿಗೆ ಪೂರಕವಾಗಿ ವ್ಯವಸ್ಥೆಗಳನ್ನು ಕಲ್ಪಿಸುವುದರ ಮೂಲಕ ಮಾರುಕಟ್ಟೆ ಪ್ರಾಂಗಣಗಳ ಸದುಪಯೋಗ ಪಡಿಸಿಕೊಳ್ಳಲು ಕಾರ್ಯಕ್ರಮ ರೂಪಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

5. ಮಾರುಕಟ್ಟೆ ಪ್ರಾಂಗಣಗಳಲ್ಲಿ **ವಿವಿಧ ಸಾಮರ್ಥ್ಯದ ಮತ್ತು ವಿವಿಧ ಅನುದಾನಗಳಡಿಯಲ್ಲಿ** ಸಮಿತಿಗಳು ಗೋದಾಮುಗಳನ್ನು ನಿರ್ಮಿಸಿದ್ದು, ಹಲವು ಕಡೆ ಉಪಯೋಗವಾಗದೆ ಖಾಲಿ ಇರುವುದು ಗಮನಿಸಿದೆ. ರೈತರು ಸುಗ್ಗಿ ಕಾಲದಲ್ಲಿ ತಮ್ಮ ಉತ್ಪನ್ನಗಳನ್ನು ಶೇಖರಿಸಿ ಉತ್ತಮ ಧಾರಣೆ ಇರುವ ಸಂದರ್ಭದಲ್ಲಿ ಮಾರಾಟ ಮಾಡುವುದಕ್ಕೆ ಪೂರಕವಾಗಿ ಸಮಿತಿಗಳು ಗೋದಾಮುಗಳನ್ನು ಸುಗ್ಗಿ ಕಾಲಕ್ಕೆ ಸೀಮಿತವಾದಂತೆ ಮೂರು ತಿಂಗಳ ಅವಧಿ ಮೀರದಂತೆ ರೈತರ ಕೋರಿಕೆಗಳನ್ನು ಪರಿಗಣಿಸಿ ಮಾರುಕಟ್ಟೆ ದರದಲ್ಲಿ ಇರುವ ಗೋದಾಮು ದರಗಳಲ್ಲಿ ಶೇ.40-50 ರಷ್ಟು ರಿಯಾಯಿತಿ ನೀಡುವುದಕ್ಕೆ ಕ್ರಮ ಕೈಗೊಳ್ಳಲು ಹಾಗೂ **ಇನ್ನು ಮುಂದೆ ಹೊಸ ಗೋದಾಮುಗಳನ್ನು ನಿರ್ಮಿಸಬೇಕಾದಲ್ಲಿ ಬೇಡಿಕೆ ಆಧಾರಿತ ವರದಿ ಪರಿಗಣಿಸಿ ಕ್ರಮ ಕೈಗೊಳ್ಳಲು** ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ಆಡಳಿತ ಸುಧಾರಣಾ ಆಯೋಗ ನೀಡಿರುವ ವರದಿಯಲ್ಲಿ ಲೈಸೆನ್ಸ್ ನಮೂನೆಗಳ ಸರಳೀಕರಣ, **FACE LESS ಆನ್‌ಲೈನ್ ವ್ಯವಸ್ಥೆ, ಲೈಸೆನ್ಸ್ ಶುಲ್ಕ ಪರಿಷ್ಕರಣೆ ಮುಂತಾದ ಅಂಶಗಳಿಗೆ ತಿದ್ದುಪಡಿಗಳನ್ನು ತಂದು ಲೈಸೆನ್ಸ್ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು ಹಾಗೂ ಎಲ್ಲಾ ವಿವರಗಳನ್ನು ಎಪಿಎಂಸಿ ವೆಬ್‌ಸೈಟ್ ನಲ್ಲಿ ಲಭ್ಯವಾಗುವಂತೆ** ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

7. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪ್ರಸ್ತುತ ನಿರ್ವಹಿಸುತ್ತಿರುವ ಕಡತ/ಲೆಕ್ಕಪತ್ರ/ ಸಮಿತಿ ಆಸ್ತಿ ನಿರ್ವಹಣೆ ಮುಂತಾದ ದಾಖಲೆಗಳನ್ನು ಕಡ್ಡಾಯವಾಗಿ ಒಂದು ವರ್ಷದೊಳಗೆ Digitalization (***Enterprise Resource Planning (ERP))*** ಮಾಡಲು ಕಾರ್ಯಕ್ರಮ ರೂಪಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಶೀಘ್ರ ಹಾಳಾಗುವಂತಹ ಹಣ್ಣು, ಹೂವು ಮತ್ತು ತರಕಾರಿ ವಹಿವಾಟು ನಡೆಯುವ ಮಾರುಕಟ್ಟೆಗಳಲ್ಲಿ ಕಡ್ಡಾಯವಾಗಿ ಬೇಡಿಕೆ ಆಧರಿಸಿ ಶೈತ್ಯಾಗಾರಗಳನ್ನು ನಿರ್ಮಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಜಿಲ್ಲೆ ಒಂದು ಉತ್ಪನ್ನ ಪರಿಕಲ್ಪನೆಯ ಜೊತೆಗೆ ಈಗಾಗಲೇ ಗುರುತಿಸಿರುವಂತೆ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಲು ಅನುಕೂಲವಾಗುವಂತೆ ಕೈಗಾರಿಕೆಗಳಿಗೆ, ಸಂಸ್ಕರಣಾ ಘಟಕಗಳಿಗೆ ಉತ್ತೇಜನ ರೂಪಿಸಲು ಆ ಮೂಲಕ ಅಭಿವೃದ್ಧಿಗೆ ಪೂರಕವಾಗುವಂತೆ ಮೂಲ ಸೌಕರ್ಯಗಳನ್ನು ಎಪಿಎಂಸಿ ವತಿಯಿಂದ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಉದಾಹರಣೆಗೆ ಕೋಲಾರ-ಟೊಮೊಟೊ, ವಿಜಯಪುರ-ಒಣದ್ರಾಕ್ಷಿ, ನಿಂಬೆಹಣ್ಣು, **ಹಾವೇರಿ-ಬ್ಯಾಡಗಿ-ಒಣಮೆಣಸಿನಕಾಯಿ, ದಾವಣಗೆರೆ-ಅಡಿಕೆ,**

**ಶಿವಮೊಗ್ಗ-ಅನಾನಸ್, ಕಲಬುರಗಿ-ತೊಗರಿ ಬೇಳೆ, ತಿಪಟೂರು-ಕೊಬ್ಬರಿ, ತೆಂಗು** ಇತ್ಯಾದಿ.

10. ರಾಜ್ಯದ ಎಲ್ಲಾ ಎಪಿಎಂಸಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ತ್ವರಿತಗತಿಯಲ್ಲಿ ಸಿಬ್ಬಂದಿ ನೇಮಕ ಮಾಡಲು ಹಾಗೂ ಒಂದು ವೇಳೆ ನೇಮಕಾತಿ ವಿಳಂಬವಾದಲ್ಲಿ **ಹೊರಗುತ್ತಿಗೆ ಆಧಾರದಲ್ಲಿ ಮೀಸಲಾತಿ, ಅರ್ಹತೆ ಪರಿಗಣಿಸಿ ಪಾರದರ್ಶಕ ನಿಯಮ ಪಾಲಿಸಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾದರಿಯಲ್ಲಿ ಸೇವೆ ಪಡೆದುಕೊಳ್ಳಲು** ಅವಕಾಶಿಸಲು ಸರ್ಕಾರವು ಕ್ರಮಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

11. ಪ್ರಸ್ತುತ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ **ರಾಜ್ಯ,** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತಿಗೆ ನಿಯೋಜಿಸಲು ತರಬೇತಿ ನೀತಿಯನ್ನು ಇಲಾಖೆ ರೂಪಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

12. **ಆರ್ಥಿಕವಾಗಿ, ಬೆಳೆ ಪರಿಸ್ಥಿತಿ ಬದಲಾವಣೆಯಿಂದ ದುರ್ಬಲಗೊಂಡಿರುವ** ಎಪಿಎಂಸಿಗಳನ್ನು **ಆರ್ಥಿಕವಾಗಿ ಸದೃಢವಾಗಿರುವ** ಎಪಿಎಂಸಿಗಳ ಜೊತೆ ವಿಲೀನ ಮಾಡಲು ಸರ್ಕಾರವು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

13. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಪಿಎಂಸಿಗಳ **ಪ್ರಾಂಗಣದ ಮುಂಭಾಗದಲ್ಲಿ, ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ, ಬಂದರಿಗೆ ಹತ್ತಿರವಿರುವಂತೆ ಸ್ಥಳಾವಕಾಶವಿದ್ದು** ಖಾಲಿ ಜಾಗಗಳಲ್ಲಿ ಖಾಸಗಿ ಮತ್ತು ಇತರೆ ಸಂಸ್ಥೆಗಳಿಂದ ಒತ್ತುವರಿಯಾಗುವುದನ್ನು ತಪ್ಪಿಸಲು ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದಂತೆ ಚಟುವಟಿಕೆ ಕೈಗೊಳ್ಳಲು, ವಾಣಿಜ್ಯ ಕಟ್ಟಡ ನಿರ್ಮಾಣ (Commercial Complex) ಮತ್ತು SEZ (Special economic Zone) ಮಾದರಿಯಲ್ಲಿ ರಫ್ತು ಉತ್ತೇಜಕ ಕೇಂದ್ರಗಳನ್ನು ನಿರ್ಮಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

14. ಎಪಿಎಂಸಿಗಳಲ್ಲಿ ನಿರ್ಮಿಸಿರುವ ಗೋದಾಮುಗಳು, ಸಮಿತಿ ವಶದಲ್ಲಿರುವ ಆಸ್ತಿ, ಕಟ್ಟಡ, ನಿವೇಶನಗಳನ್ನು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ರೈತ ಉತ್ಪಾದಕ ಸಂಸ್ಥೆ (FPO), ಸಹಕಾರ ಮಾರುಕಟ್ಟೆ ವ್ಯವಹಾರ ಸಂಘ (Co-operative Marketing Society) ಗಳಿಗೆ ದೀರ್ಘಾವಧಿಗೆ ಬಾಡಿಗೆ ರೂಪದಲ್ಲಿ ಶೇ.50 ರಿಂದ ಶೇ.60 ರಷ್ಟು ರಿಯಾಯಿತಿ ದರದಲ್ಲಿ ನೀಡಲು ಅಗತ್ಯವಿದ್ದಲ್ಲಿ ಕಾನೂನು ತಿದ್ದುಪಡಿ ಮಾಡಿ ಕ್ರಮ ವಹಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

15. ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಘನ/ದ್ರವ ತ್ಯಾಜ್ಯ ನಿರ್ವಹಣೆ, ಮಳೆ ನೀರು ಸಂಗ್ರಹಣೆ, ಸೌರ ಶಕ್ತಿ ಉತ್ಪಾದನೆ ಮತ್ತು BIO-CNG ಅಳವಡಿಸಿಕೊಳ್ಳಲು ಹಾಗೂ ಪೆಟ್ರೋಲ್ ಬಂಕ್, ಪರಿಸರ ಸ್ನೇಹಿ ಕ್ರಮವಾಗಿ ಇ-ಚಾರ್ಜಿಂಗ್

ಸೌಲಭ್ಯಗಳನ್ನು ಪಿ.ಪಿ.ಪಿ **ಮಾದರಿ ಅಥವಾ ಸರ್ಕಾರದ ಅನುಧಾನ/ಸಮಿತಿ ನಿಧಿಯಿಂದ ಒದಗಿಸಲು** ಕ್ರಮ ವಹಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

16. ಮಾರುಕಟ್ಟೆ ಪ್ರಾಂಗಣಗಳಲ್ಲಿ ಈಗಿರುವ ವ್ಯವಸ್ಥೆಗಳನ್ನು ಪರಿಶೀಲಿಸಿದ್ದು, ರೈತರಿಗೆ ಮೂಲಭೂತ ಸೌಕರ್ಯಗಳಾದ ಶುದ್ಧ ಕುಡಿಯುವ ನೀರು**, ಸ್ತ್ರೀ ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ,** ವಿಶ್ರಾಂತಿ ಗೃಹಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

17. **ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಹಮಾಲರು, ಗಾಡಿಯವರು, ಚಕ್ಕಡಿಯವರು ಇವರುಗಳಿಗೆ ಪ್ರತ್ಯೇಕವಾಗಿ (ಸ್ತ್ರೀ ಮತ್ತು ಪುರುಷರಿಗೆ) ವಿಶ್ರಾಂತಿ ಗೃಹ ಒದಗಿಸುವುದು.** ಕೇಂದ್ರ ಸರ್ಕಾರದ ಜನಶ್ರೀ ಭೀಮಾ ಯೋಜನೆ, ಪ್ರಧಾನ ಮಂತ್ರಿ ಜನಾರೋಗ್ಯ ಸ್ಕೀಂ, ಆಯುಷ್ಮಾನ್ ಭಾರತ್, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ, **ಅಟಲ್ ಪೆನ್‌ಷನ್ ಯೋಜನೆಗಳನ್ನು** ಮಾರುಕಟ್ಟೆ ಸಮಿತಿಗಳು ಜಾರಿಗೊಳಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

18. ಎಪಿಎಂಸಿಗಳಲ್ಲಿ ಒತ್ತುವರಿಯಾಗಿರುವಂತಹ ಎಲ್ಲಾ ಎಪಿಎಂಸಿ ಆಸ್ತಿಗಳನ್ನು ಅನಧಿಕೃತ ಒತ್ತುವರಿ ತೆರವುಗೊಳಿಸುವ ಕಾಯ್ದೆಯಡಿ ಒಂದು ವರ್ಷದೊಳಗೆ ತೆರವುಗೊಳಿಸಿ ಸಮಿತಿ ವಶಕ್ಕೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಸಮಿತಿ ಹೊಂದಿರುವ ಎಲ್ಲಾ ಆಸ್ತಿ ದಾಖಲೆಗಳನ್ನು ಸಂರಕ್ಷಿಸಲು ಸಮಿತಿ ಹೆಸರಿಗೆ ಕಂದಾಯ ಇಲಾಖೆಯಿಂದ ಇಂಧೀಕರಿಸಿಕೊಳ್ಳಲು ಕ್ರಮ ಕೈಗೊಳ್ಳುವುದರ ಮೂಲಕ ಸಮಿತಿ ಆಸ್ತಿ ಸಂರಕ್ಷಣೆಗೆ ಮುಂದಾಗಬೇಕೆಂದು ಹಾಗೂ ಸದರಿ **ಆಸ್ತಿ ಪಟ್ಟಿಯನ್ನು ಕೇಂದ್ರ ಕಛೇರಿಯಿಂದ ಸಿಗುವಂತೆ ವ್ಯವಸ್ಥೆಗೊಳಿಸಲು** ಸಮಿತಿಯು ಶಿಫಾರಸ್ಸು ಮಾಡುತ್ತದೆ.

19. ಬೆಂಗಳೂರು ನಗರ/ ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪುಷ್ಪೋದ್ಯಮಕ್ಕೆ ಬೇಕಾದ ಪೂರಕ ವಾತಾವರಣ ಇದೆ. ನೂರಾರು ಎಕರೆ ಭೂಮಿಯಲ್ಲಿ Green House/Poly house ಮುಖೇನ ಹೂವು ಬೆಳೆಯುತ್ತಿದ್ದು ರಫ್ತು ಮಾಡಲು ವಿಪುಲ ಅವಕಾಶಗಳಿವೆ. ಇವುಗಳನ್ನು ಸದುಪಯೋಗಪಡಿಸಿಕೊಳ್ಳುವುದು ಮತ್ತು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹೆಬ್ಬಾಳದಲ್ಲಿರುವ (IFAC- International Flower auction Centre) ಹೂವು ಮಾರುಕಟ್ಟೆ ಒಳಗೊಂಡಂತೆ ದೇವನಹಳ್ಳಿ ಸುತ್ತ-ಮುತ್ತ ವಿಶೇಷವಾದ ಸುಸಜ್ಜಿತ ಅಂತರಾಷ್ಟ್ರೀಯ ಮಾರುಕಟ್ಟೆಯನ್ನು 2 ವರ್ಷದ ಅವಧಿಯೊಳಗೆ ಸ್ಥಾಪಿಸಲು ಕ್ರಮ ವಹಿಸಲು ಸಮಿತಿ ಶಿಫಾರಸ್ಸು ಮಾಡುತ್ತದೆ. ಮುಂದುವರೆದು, ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಬಡವನಹಳ್ಳಿ, ಸಿರಾ ಸುತ್ತಮುತ್ತ ಮಲ್ಲಿಗೆ ಮತ್ತು ಕಾಕಡ ಕೃಷಿ ಅತ್ಯಧಿಕವಾಗಿದ್ದು ಹಾಗೂ ಮಂಗಳೂರು, ಉಡುಪಿ ಪ್ರದೇಶದಲ್ಲಿ ಬೆಳೆಯುವ

ಶಂಕರಪುರಂ ಮಲ್ಲಿಗೆ ಹೂವು ಬೆಳೆಯನ್ನು ಸಂಗ್ರಹಿಸಿ, ಪೋಷಿಸಿ ವಿಶೇಷ ಮಾರುಕಟ್ಟೆ ಕಲ್ಪಿಸಲು ಎಪಿಎಂಸಿ ಮತ್ತು ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ಕಾರ್ಯಕ್ರಮ ರೂಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

20. ಇತ್ತೀಚಿನ ದಿನಗಳಲ್ಲಿ ತೆಂಗು ಬೆಳೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರೈತರಿಗೆ ಸಾಂಸ್ಥಿಕ ಬಲ ತುಂಬಿ ಉತ್ಪಾದಕತೆ ಮತ್ತು ಮಾರುಕಟ್ಟೆ ಸಾಮರ್ಥ್ಯವನ್ನು ವೃದ್ಧಿಸಲು ಪೂರಕ ಯೋಜನೆಯನ್ನು ರೂಪಿಸಲು ಮತ್ತು ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಇರುವಂತೆ ಹೊರ ದೇಶಗಳಿಗೆ ರಫ್ತು ಮಾಡುವ ಸಂಬಂಧ ಅಗತ್ಯವಿದ್ದಲ್ಲಿ ಕಾಯ್ದೆಗೆ ಸೂಕ್ತವಾಗಿ ತಿದ್ದುಪಡಿ ಮಾಡಿಕೊಳ್ಳಲು ಮತ್ತು ವಿಶೇಷ ತಂತ್ರಜ್ಞರ ಸಮಿತಿ ರಚಿಸಿ ಕಾರ್ಯ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಮತ್ತು ತೆಂಗು ಸಂಸ್ಕರಣ ಘಟಕಗಳ ಸ್ಥಾಪನೆಗೆ ಉತ್ತೇಜನ ನೀಡಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

21. ಎಪಿಎಂಸಿಗಳಲ್ಲಿ ಸಂಗ್ರಹವಾಗುವ ಮಾರುಕಟ್ಟೆ ಶುಲ್ಕ/ಬಳಕೆದಾರರ ಶುಲ್ಕ, ಲೀವ್ & ಲೈಸೆನ್ಸ್ ಶುಲ್ಕ ಹಾಗೂ ಇತರೆ ಆದಾಯದಲ್ಲಿ ಉಳಿತಾಯವಾಗುವ ಹೆಚ್ಚುವರಿ ಮೊತ್ತದ ಶೇ.50ರಷ್ಟನ್ನು ಸದೃಢವಾಗಿರುವ "**ಎ**" ವರ್ಗೀಕೃತ DCC ಬ್ಯಾಂಕುಗಳಲ್ಲಿ ಮಾತ್ರ ತೊಡಗಿಸಲು ಆರ್ಥಿಕ ಇಲಾಖೆಯಿಂದ ಸೂಕ್ತ ಆದೇಶ ಹೊರಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

22. ಕೃಷಿ ಉತ್ಪನ್ನ ಮಾರುಕಟ್ಟ ಸಮಿತಿಗಳು ಸ್ಥಳೀಯ ಪ್ರಾಧಿಕಾರವಾಗಿದ್ದು, ಮಾರುಕಟ್ಟೆ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಿ ಮೂಲಭೂತ ಸೌಕರ್ಯಗಳನ್ನು ತಮ್ಮ ಸ್ವಂತ ನಿಧಿಯಿಂದ ಒದಗಿಸುತ್ತಿವೆ. ಪುರಸಭೆ / ನಗರ ಸಭೆ / ಮಹಾನಗರ ಪಾಲಿಕೆಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿರುವ ಕಟ್ಟಡಗಳನ್ನು ವಾಣಿಜ್ಯ ಉದ್ದೇಶವೆಂದು ಪರಿಗಣಿಸಿ ಆಸ್ತಿ ತೆರಿಗೆ ವಿಧಿಸುತ್ತಿರುವುದು ಪ್ರಾಂಗಣಗಳಲ್ಲಿನ ವರ್ತಕರಿಗೆ ಹೊರೆಯಾಗಿರುತ್ತದೆ. ಆದ್ದರಿಂದ, ಮಾರುಕಟ್ಟೆ ಸಮಿತಿಗಳೇ ಪ್ರಾಂಗಣಗಳನ್ನು ನಿರ್ಮಿಸಿ, ನಿರ್ವಹಣೆ ಮಾಡುತ್ತಿರುವುದರಿಂದ ಪ್ರಾಂಗಣಗಳಲ್ಲಿನ ಕಟ್ಟಡಗಳಿಗೆ ಪ್ರತ್ಯೇಕ ವರ್ಗೀಕರಣ ಮಾಡಿ ಆಸ್ತಿ ತೆರಿಗೆಯನ್ನು ರಿಯಾಯಿತಿ ದರದಲ್ಲಿ ನಿಗಧಿಪಡಿಸುವ ಬಗ್ಗೆ **ಮುನಿಸಿಫಲ್ ಕಾಯ್ದೆಗೆ ತಿದ್ದುಪಡಿ ತರಲು ನಗರಾಭಿವೃದ್ಧಿ ಇಲಾಖೆ ಕ್ರಮ ಕೈಗೊಳ್ಳಲು** ಸಮಿತಿಯು ಶಿಫಾರಸ್ಸು ಮಾಡುತ್ತದೆ. **ಎಲ್ಲಾ ಆಸ್ತಿಗಳನ್ನು ಇ-ಆಸ್ತಿ ಅಡಿಯಲ್ಲಿ ಖಾತಾ ದಾಖಲಿಸಲು ಕ್ರಮ ವಹಿಸುವುದು.**

23. ಮಾರುಕಟ್ಟೆ ಪ್ರಾಂಗಣಗಳಲ್ಲಿ ವಹಿವಾಟು ಹೆಚ್ಚಿಸಲು ಕ್ರಮ ಕೈಗೊಳ್ಳುವುದರಿಂದ ಮಾರುಕಟ್ಟೆ ಪ್ರಾಂಗಣದ ಹೊರಗಿನ ವಹಿವಾಟಿನ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿದೆ. ಇದಕ್ಕಾಗಿ ಉಪ ಮಾರುಕಟ್ಟೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಘೋಷಿಸುವುದು, ಕಾಯ್ದೆಯಲ್ಲಿ ಇರುವ ಇತರೆ ಅವಕಾಶಗಳಾದ

ನೇರ ಖರೀದಿ ಕೇಂದ್ರ ಸ್ಥಾಪನೆ, ಉಗ್ರಾಣ ಆಧಾರಿತ ಮಾರಾಟ ಚಟುವಟಿಕೆಗಳಿಗೆ ಇರುವ ಅವಕಾಶಗಳ ಬಗ್ಗೆ ಪ್ರಚಾರ ನೀಡಿ ರೈತರಿಗೆ ಮಾರುಕಟ್ಟೆ ಪ್ರಾಂಗಣದ ಜೊತೆಗೆ ಮೇಲ್ಕಂಡ ಆಯ್ಕೆಗಳ ಸೌಲಭ್ಯ ಪಡೆಯಲು ಕ್ರಮ ವಹಿಸುಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

24. ಅಕ್ಕಿ ಗಿರಣಿದಾರರ ಸಂಘ ಸಮಿತಿಗೆ ಮನವಿಯನ್ನು ಸಲ್ಲಿಸಿದ್ದು, ಭತ್ತ ಮತ್ತು ಅಕ್ಕಿ ವಹಿವಾಟು ಹೆಚ್ಚಿನ ಪ್ರಮಾಣದಲ್ಲಿ ರಾಜ್ಯದಲ್ಲಿ ನಡೆಯುವುದರಿಂದ ಗಿರಣಿದಾರರ ವಹಿವಾಟು ಸುಲಲಿತವಾಗಿ ನಡೆಯಲು **ಆನ್‌ಲೈನ್ ವಿಧಾನಗಳಾದ ಜಿ.ಎಸ್.ಟಿ ಇನ್‌ವಾಯ್ಸ್/ಬಿಲ್ಲುಗಳನ್ನು ವಹಿವಾಟಿನ ದಾಖಲೆಯಾಗಿ ಪರಿಗಣಿಸಲು ಮತ್ತು ಮಾರುಕಟ್ಟೆ ಶುಲ್ಕ ನಿರ್ಧರಣೆ ಮಾಡುವಾಗ ಗಿರಣಿಗಳು ಬಳಸುವ ವಿದ್ಯುತ್ ಉಪಯೋಗಕ್ಕೆ ಪಡೆದಿರುವ ಬಿಲ್ಲನ್ನು ಪರಿಗಣಿಸಿ ಸರಾಸರಿ ಆಧಾರದ ಮೇಲೆ ಶುಲ್ಕ ವಸೂಲಾತಿಗೆ ಕ್ರಮ ವಹಿಸುವ ಬಗ್ಗೆ ಪರಿಶೀಲಿಸಲು** ಸಮಿತಿಯು ಶಿಫಾರಸ್ಸು ಮಾಡುತ್ತದೆ. ಮಾರುಕಟ್ಟೆ ಪ್ರಾಂಗಣಗಳಲ್ಲಿ ಭತ್ತ ವಹಿವಾಟು ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿದ್ದು, ನೇರವಾಗಿ ರೈತರು ಅಕ್ಕಿ ಗಿರಣಿಗಳಿಗೆ ಮಾರಾಟ ಮಾಡುತ್ತಿರುವುದು ಮತ್ತು ಅಕ್ಕಿ ಗಿರಣಿದಾರರೇ ರೈತರ ಹೊಲಗಳಿಂದ ಖರೀದಿ ಮಾಡುತ್ತಿರುವ ಪದ್ಧತಿಯನ್ನು ಸಮಿತಿಯು ಗಮನಿಸಿದೆ. ಮಾರುಕಟ್ಟೆ ಪ್ರಾಂಗಣಗಳಲ್ಲಿಯೇ ವಹಿವಾಟು ನಡೆಸಬೇಕೆಂಬ ಕಡ್ಡಾಯ ನಿಬಂಧನೆಗೆ ತೊಂದರೆಯಾಗುತ್ತಿದ್ದು ಇದಕ್ಕೆ ಪೂರಕವಾಗಿ ಸಮಿತಿಯಿಂದ ಲೈಸೆನ್ಸ್ ಪಡೆದು ಕಾರ್ಯ ನಿರ್ವಹಿಸುತ್ತಿರುವ ಅಕ್ಕಿ ಗಿರಣಿದಾರರ ಘಟಕಗಳನ್ನು ಮಾರುಕಟ್ಟೆ ಉಪ ಪ್ರಾಂಗಣ/ಉಪ ಮಾರುಕಟ್ಟೆ ಪ್ರಾಂಗಣ ಎಂದು ಘೋಷಿಸಬಹುದಾಗಿದೆ. ಸದರಿಯವರು ನೇರ ಖರೀದಿ ಕೇಂದ್ರದ ಲೈಸೆನ್ಸ್ ಪಡೆದಿರುವವರ ರೀತಿಯಲ್ಲಿ ಕಾರ್ಯನಿರ್ವಹಿಸುವುದರಿಂದ ಅಕ್ಕಿ ಗಿರಣಿದಾರರಿಗೆ ಸಂಬಂಧಿಸಿದಂತೆ ಹಾಗೂ ಇದೇ ರೀತಿ ಮಾರುಕಟ್ಟೆ ಪ್ರಾಂಗಣದ ಹೊರಗಡೆ ಅಧಿಸೂಚಿತ ಉತ್ಪನ್ನಗಳ ಸಂಸ್ಕರಣ ಘಟಕಗಳು ಸಮಿತಿಗಳಿಂದ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿದ್ದು, ಅವುಗಳಿಗೂ ಸಹ ಮಾರುಕಟ್ಟೆ ಶುಲ್ಕದಲ್ಲಿ ರಿಯಾಯಿತಿ ನೀಡಿ ಸಂಸ್ಕರಣ ಕ್ಷೇತ್ರ ಬಲಪಡಿಸುವ ಬಗ್ಗೆ ಸರ್ಕಾರವು ಪರಿಶೀಲಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

25. ಪ್ರಸ್ತುತ ಮಾರುಕಟ್ಟೆ ಸಮಿತಿಗಳ ಹಂತದಲ್ಲಿ ಉದ್ಭವವಾಗುವ ವಿವಾದಗಳನ್ನು ಪರಿಶೀಲಿಸಲು ಕಾಯ್ದೆಯಲ್ಲಿ ಸಮಿತಿ ರಚನೆಗೆ ಅವಕಾಶವಿರುತ್ತದೆ**. ರಾಜ್ಯ ಮಟ್ಟದಲ್ಲಿ ಕೃಷಿ ಮಾರಾಟ ನಿರ್ದೇಶಕರ ಅಧ್ಯಕ್ಷತೆಯಲ್ಲಿ OMBUDSMEN ರೀತಿಯಲ್ಲಿ ವಿವಾದ ಪರಿಶೀಲನೆಗೆ ವ್ಯವಸ್ಥೆ ಮಾಡಿ ಕಾಲಮಿತಿಯಲ್ಲಿ ಪರಿಹರಿಸಲು ಕ್ರಮ ವಹಿಸುವ** ಬಗ್ಗೆ ಪರಿಶೀಲಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

26. ಪ್ರಾಂಗಣಗಳಲ್ಲಿ ನಡೆಯುವ ಅಧಿಸೂಚಿತ ಕೃಷಿ ಉತ್ಪನ್ನಗಳು ಕಲಬೆರಕೆಯಿಂದ ಮುಕ್ತವಾಗಿರುವ ಬಗ್ಗೆ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಸಂಬಂಧಿಸಿದಂತೆ fssai (Food Safety and Standards Authority of India) ಪ್ರಾಧಿಕಾರದೊಂದಿಗೆ ಸಂವಹನೆ ನಡೆಸಿ ಸೂಕ್ತ ಕಾರ್ಯಕ್ರಮ ರೂಪಿಸಿ **ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು** ಹಾಗೂ **ಸಂಸ್ಕರಿತ ಉತ್ಪನ್ನಗಳಾದ ಬೆಲ್ಲ, ಬೇಳೆಕಾಳುಗಳು, ಅಕ್ಕಿ ಮುಂತಾದ ಉತ್ಪನ್ನಗಳಲ್ಲಿ ವ್ಯವಹರಿಸುವ ಪೇಟೆ ಕಾರ್ಯಕರ್ತರುಗಳಿಗೆ ಸೀಮಿತಗೊಳಿಸಿ ಸದರಿಯವರು ಲೈಸೆನ್ಸ್ ಪಡೆಯುವಾಗ fssai (Food Safety and Standards Authority of India) ಪ್ರಮಾಣ ಪತ್ರ ಸಲ್ಲಿಸಲು ಕಡ್ಡಾಯಗೊಳಿಸಲು** ಸಮಿತಿಯು ಶಿಫಾರಸ್ಸು ಮಾಡುತ್ತದೆ.

27. ಜಿ.ಎಸ್.ಟಿ ಕಾಯ್ದೆಯಡಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸರಕು ಸಾಗಾಣಿಕೆ ಸಂಬಂಧ ಇ-ವೇ ಬಿಲ್ ವ್ಯವಸ್ಥೆ ಜಾರಿಯಲ್ಲಿದ್ದು, ಕೃಷಿ ಮಾರುಕಟ್ಟೆ ಇಲಾಖೆಯಲ್ಲಿಯೂ ಆನ್ ಲೈನ್ ನಲ್ಲಿ ಪರ್ಮಿಟ್ ನೀಡುವ ಬಗ್ಗೆ ವ್ಯವಸ್ಥೆ ಇದ್ದು, ಎರಡು ವ್ಯವಸ್ಥೆಗಳನ್ನು ತುಲನೆ ಮಾಡಿ ಸೂಕ್ತವಾಗಿ **ಸಂಯೋಜನೆ** ಮಾಡಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**ಬೆಂಗಳೂರು**
**ದಿನಾಂಕ:31.01.2024**

**ಶಿವಾನಂದ ಎಸ್. ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ, ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು ಮತ್ತು ಅಧ್ಯಕ್ಷರು,
ಪರಿಶೀಲನಾ ಸಮಿತಿ,

**ಕೆ.ಆರ್.ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ–01**

ಕರ್ನಾಟಕ ವಿಧಾನ ಪರಿಷತ್ತು
ನೂರ ಐವತ್ತನೆಯ ಅಧಿವೇಶನ

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023

(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)

(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 8ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ 27) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 8ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿನ "ಮಾರುಕಟ್ಟೆ ಸಮಿತಿಯು" ಎಂಬ ಪದಗಳ ತರುವಾಯ "ಅಥವಾ ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಆತನಿಂದ ಪ್ರಾಧೀಕರಿಸಿದ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಮಾರುಕಟ್ಟೆ ಪ್ರಾಂಗಣ, ಮಾರುಕಟ್ಟೆ ಉಪ ಪ್ರಾಂಗಣ, ಉಪ ಮಾರುಕಟ್ಟೆ ಪ್ರಾಂಗಣ, ಖಾಸಗಿ ಮಾರುಕಟ್ಟೆ ಪ್ರಾಂಗಣ ಅಥವಾ ಸಂದರ್ಭಾನುಸಾರವಾಗಿ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣವನ್ನು ಹೊರತುಪಡಿಸಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಅಥವಾ ಮಾರಾಟಕ್ಕಾಗಿ ಉಪಯೋಗಿಸತಕ್ಕದ್ದಲ್ಲ".

(iii) ಹಾಗೆ ಪ್ರತಿಯೋಜಿಸಿದ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) (2)ನೇ ಉಪಪ್ರಕರಣದಲ್ಲಿರುವುದಾವುದೂ,-

(ಎ) (i) ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘದ ಮೂಲಕ ಮಾಡಿರುವ;

(ii) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ಮಾಡಿರುವ; ಮತ್ತು

(iii) ರಾಜ್ಯ ಸರ್ಕಾರವು ಅನುಮತಿ ನೀಡಿದ ಯಾವುದೇ ಇತರ ಸಹಕಾರ ಸಂಘದ ಮೂಲಕ ಮಾಡಿರುವ,

-ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಅಥವಾ ಮಾರಾಟಕ್ಕೆ,

(ಬಿ) ಚಿಲ್ಲರೆ ವ್ಯಾಪಾರಿಯ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟಕ್ಕೆ,

(ಸಿ) ಕರಾರು ವ್ಯವಸಾಯ ಒಪ್ಪಂದದಡಿಯಲ್ಲಿ ಕರಾರು ವ್ಯವಸಾಯ ಪ್ರಾಯೋಜಕನಿಗೆ ಕರಾರು ವ್ಯವಸಾಯ ಉತ್ಪಾದಕನ ಮೂಲಕ ಮಾಡಿದ ಮಾರಾಟಕ್ಕೆ,

(ಡಿ) ಅಧಿನಿಯಮದ 72-ಎ ಪ್ರಕರಣದಡಿಯಲ್ಲಿ ಕೃಷಿಕನಿಂದ ಲೈಸನ್ಸುದಾರನ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನದ ನೇರ ಖರೀದಿಗೆ,

- ಅನ್ವಯವಾಗತಕ್ಕದ್ದಲ್ಲ".

**3. 117ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 117ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**117. 8ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** 8ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಬಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸುವ ಅಥವಾ ಸಿಂಧುವಾದ ಲೈಸನ್ಸು ಇಲ್ಲದೆ ವ್ಯಾಪಾರಿಯಾಗಿ, ದಳ್ಳಾಳಿಯಾಗಿ, ಬ್ರೋಕರ್ ಆಗಿ, ಸಂಸ್ಕರಣಕಾರನಾಗಿ, ದಾಸ್ತಾನುಗಾರನಾಗಿ ಅಥವಾ ಯಾವುದೇ ಸಾಮರ್ಥ್ಯದಲ್ಲಿ, 8ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿ ಮತ್ತು ಮಾರಾಟಕ್ಕೆ ಯಾವುದೇ ಸ್ಥಳವನ್ನು ಉಪಯೋಗಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಿತನಾದ ಮೇಲೆ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಬಾರಿಯ ಉಲ್ಲಂಘನೆಯ ಸಂದರ್ಭದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಹಾಗೂ ಮೂರನೇ ಬಾರಿಯ ಉಲ್ಲಂಘನೆಯ ಸಂದರ್ಭದಲ್ಲಿ ಮೂವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರಲ್ಲಿನ ಪ್ರಕರಣ 8(2), ಪ್ರಕರಣ 8(3) ಮತ್ತು ಪ್ರಕರಣ 117ಕ್ಕೆ ತಿದ್ದುಪಡಿಯನ್ನು ಅಧ್ಯಾದೇಶದ ಮೂಲಕ ಮಾಡಿ 16.05.2020ರಂದು ಪ್ರಕಟಿಸಲಾಗಿತ್ತು. ಆ ತರುವಾಯ ಸದರಿ ಅಧ್ಯಾದೇಶವನ್ನು ಅಧಿನಿಯಮ ಸಂಖ್ಯೆ.59/2020ರ ಮೂಲಕ ಪರಿವರ್ತಿಸಿ, ಅದನ್ನು 31.12.2020ರಂದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಅದರ ಮುಖ್ಯಾಂಶಗಳೆಂದರೆ:-

1. ಸದರಿ ತಿದ್ದುಪಡಿಯ ಪರಿಣಾಮವಾಗಿ, ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ಮತ್ತು ಮಾರಾಟ ಕೈಗೊಳ್ಳುವುದಕ್ಕಾಗಿನ ನಿರ್ಬಂಧವನ್ನು ತೆಗೆದುಹಾಕಲಾಗಿತ್ತು ಮತ್ತು ಎಪಿಎಂಸಿಗಳ ಪಾತ್ರವನ್ನು ಮಾರುಕಟ್ಟೆ ಪ್ರಾಂಗಣಗಳಿಗೆ ಮಾತ್ರ ನಿರ್ಬಂಧಿಸಲಾಗಿತ್ತು. ಮಾರುಕಟ್ಟೆ ಪ್ರಾಂಗಣಗಳ ಹೊರಗಿನ ವ್ಯಾಪಾರವನ್ನು ನಿಷೇಧಿಸುವ ಅಧಿನಿಯಮದ ಪ್ರಕರಣ 8(2)ರಡಿಯಲ್ಲಿನ ನಿರ್ಬಂಧವನ್ನು, ಹಾಗೂ ಅದರ ಉಲ್ಲಂಘನೆಗಾಗಿ 117ನೇ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ದಂಡ ವಿಧಿಸುವಿಕೆಯನ್ನು ಮತ್ತು ಅಪರಾಧ ನಿರ್ಣಯವನ್ನು ಬಿಟ್ಟುಬಿಡಲಾಗಿತ್ತು. ಅಧಿನಿಯಮದ ಪ್ರಕರಣ 8(2)ರಡಿಯಲ್ಲಿ ವಿಧಿಸಿದ ನಿರ್ಬಂಧಗಳಿಗಾಗಿ ಪ್ರಕರಣ 8(3)ರಡಿಯಲ್ಲಿ ನೀಡಲಾದ ಕೆಲವು ವಿನಾಯಿತಿಗಳನ್ನು ಸಹ ಬಿಟ್ಟುಬಿಡಲಾಗಿತ್ತು.

2. ಭಾರತ ಸರ್ಕಾರವು 2020ರ ಅಧ್ಯಾದೇಶ ಸಂಖ್ಯೆ.10ರ ಮೂಲಕ 03 ಕೃಷಿ ಕಾನೂನುಗಳನ್ನು ರಚಿಸಿತ್ತು ಮತ್ತು ಅವುಗಳನ್ನು 05.06.2020ರಿಂದ ಜಾರಿಗೊಳಿಸಲಾಗಿತ್ತು. ಆ ತರುವಾಯ ಸದರಿ ಅಧ್ಯಾದೇಶವನ್ನು ಅಧಿನಿಯಮ ಸಂ. 21/2020ರ ಮೂಲಕ ಪರಿವರ್ತಿಸಲಾಗಿತ್ತು ಹಾಗೂ 27.09.2020ರಿಂದ ಜಾರಿಗೊಳಿಸಿತ್ತು. ಸದರಿ ಕೃಷಿ ಕಾನೂನುಗಳನ್ನು ರೈತರು ವಿರೋಧಿಸುತ್ತಿರುವ ಕಾರಣದಿಂದಾಗಿ, ಭಾರತ ಸರ್ಕಾರವು ಸದರಿ ಅಧಿನಿಯಮವನ್ನು ಹಿಂಪಡೆಯಲು ನಿರ್ಧರಿಸಿತು ಮತ್ತು 01.12.2021ರಿಂದ ಜಾರಿಗೆ ಬರುವಂತೆ ಅದನ್ನು ಅಧಿನಿಯಮ ಸಂ.40/2021ರ ಮೂಲಕ ನಿರಸನಗೊಳಿಸಲಾಯಿತು. ಅದನ್ನು ಭಾರತ ಸರ್ಕಾರದ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು.

3. 2020ರ ಅಧಿನಿಯಮ ಸಂ. 59ರ ಮೂಲಕ ರಾಜ್ಯ ಸರ್ಕಾರವು ಮಾಡಿರುವ ತಿದ್ದುಪಡಿಗಳ ಪರಿಣಾಮವಾಗಿ ಈ ಕೆಳಕಂಡ ಪ್ರತಿಕೂಲ ಪರಿಣಾಮಗಳನ್ನು ಗಮನಿಸಲಾಗಿದೆ, ಎಂದರೆ:-

(ಎ) ಮಾರುಕಟ್ಟೆ ಪ್ರಾಂಗಣಗಳನ್ನು ಹೊರತುಪಡಿಸಿದ ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕೆ ಯಾವುದೇ ವ್ಯವಸ್ಥೆ ಇಲ್ಲದೆ ರೈತರು ಶೋಷಣೆಗೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

(ಬಿ) ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಲಭ್ಯವಿರುವ ದಾಖಲೆಗಳ ಸ್ಥೂಲ ಪರಿಶೀಲನೆ ಇಲ್ಲದೆ ಸರ್ಕಾರಕ್ಕೆ ವಿವಿಧ ಶೀರ್ಷಿಕೆಗಳಡಿಯಲ್ಲಿ ಬರಬೇಕಾದ ತೆರಿಗೆ/ಉಪಕರ ಇವುಗಳ ಸೋರಿಕೆಗೆ ಅವಕಾಶ ಉಂಟಾಗಿರುತ್ತದೆ.

(ಸಿ) ಮಾರುಕಟ್ಟೆ ಪ್ರಾಂಗಣದಲ್ಲಿ ಆನ್‌ಲೈನ್ (ಏಕೀಕೃತ ಮಾರಾಟ ವೇದಿಕೆ) ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಏಕೀಕೃತ ಮಾರುಕಟ್ಟೆ ಬೇಡಿಕೆಯಡಿಯಲ್ಲಿ ರೈತರಿಗೆ ನ್ಯಾಯೋಚಿತ ಮತ್ತು ಸ್ಪರ್ಧಾತ್ಮಕ ಬೆಲೆಯ ಪ್ರಯೋಜನ ದೊರೆಯಲು ಅವಕಾಶವಿರುತ್ತದೆ. ಪ್ರಸ್ತುತ ಮಾರುಕಟ್ಟೆ ಪ್ರಾಂಗಣದ ಹೊರಗಡೆ ಆನ್‌ಲೈನ್ ವ್ಯವಸ್ಥೆ ಇಲ್ಲದೆ ಇರುವುದರಿಂದ ರೈತರು ಬೆಳೆದ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಮತ್ತು ನ್ಯಾಯೋಚಿತ ಬೆಲೆ ಸಿಗುವ ಸಾಧ್ಯತೆಗಳು ಕಡಿಮೆಯಾಗಿರುತ್ತದೆ.

(ಡಿ) ರೈತರು ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ಮಾರಾಟ ಮಾಡಿದ ಉತ್ಪನ್ನದ ನ್ಯಾಯೋಚಿತ ಮೌಲ್ಯವನ್ನು ಪಡೆಯುವುದಕ್ಕಾಗಿ ಖಾತರಿ ವ್ಯವಸ್ಥೆಯು ಇಲ್ಲದಂತಾಗಿದೆ.

(ಇ) ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ವ್ಯವಸ್ಥೆಯನುಸಾರ ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ವಹಿವಾಟಿಗೆ ಸಂಬಂಧಿಸಿದಂತೆ, ರೈತರಿಗೆ ಮಾರಾಟಗೊಂಡ ಉತ್ಪನ್ನದ ತೂಕ ಮತ್ತು ಹಣ ಪಾವತಿ, ಇತ್ಯಾದಿಗೆ ಸಂಬಂಧಿಸಿದಂತೆ ರೈತರು ಮತ್ತು ಮಾರುಕಟ್ಟೆ ಕಾರ್ಯನಿರ್ವಹಕರ ನಡುವೆ ಉದ್ಭವಿಸುವ ವಿವಾದಗಳನ್ನು ಇತ್ಯರ್ಥಪಡಿಸಲು ಅವಕಾಶವಿರುತ್ತದೆ. ಆದರೆ, ರೈತರಿಂದ ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸದರಿ ಇತ್ಯರ್ಥ ವ್ಯವಸ್ಥೆಯು ಲಭ್ಯವಿರುವುದಿಲ್ಲ.

(ಎಫ್) ಕೃಷಿ ಉತ್ಪನ್ನಗಳು ಮತ್ತು ಆವಕಗಳಿಗಾಗಿ ರಾಜ್ಯದಲ್ಲಿನ ವಿವಿಧ ಮಾರುಕಟ್ಟೆಗಳಲ್ಲಿ ಜಾರಿಯಲ್ಲಿರುವ ದರಗಳ ಬಗ್ಗೆ ರೈತರು ತಿಳಿದಿಲ್ಲದಿರುವುದರಿಂದ, ಅವರು ತಮ್ಮ ಉತ್ಪನ್ನಗಳಿಗೆ ನಿಗದಿಪಡಿಸುವ ಬೆಲೆಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಮರ್ಥರಾಗಿರುವುದಿಲ್ಲ. ಹಾಗಾಗಿ ಅವರು ಸ್ಪರ್ಧಾತ್ಮಕ ಬೆಲೆ ಪಡೆಯುವಲ್ಲಿ ವಿಫಲರಾಗುತ್ತಾರೆ.

(ಜಿ) ರಾಜ್ಯದಲ್ಲಿನ ಮಾರುಕಟ್ಟೆ ಪ್ರಾಂಗಣಗಳನ್ನು ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಮಾರುಕಟ್ಟೆ ಸಮಿತಿಗಳ ನಿಧಿಗಳ ಅನುದಾನಗಳ ಮೂಲಕ ಅಭಿವೃದ್ಧಿಪಡಿಸಲಾಗಿರುತ್ತದೆ. ಅವುಗಳಿಗೆ ಇಲ್ಲಿಯವರೆಗೆ ಸೃಜಿಸಲಾದ ಮೂಲಭೂತ ಸೌಲಭ್ಯಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳದಿರುವುದರಿಂದ, ಅವುಗಳು ಕಾಲಕ್ರಮೇಣ ನಿರುಪಯುಕ್ತವಾಗುತ್ತವೆ.

(ಹೆಚ್) ಸರಿಸುಮಾರು ಒಂದು ಲಕ್ಷ ಮಂದಿ ಮಾರುಕಟ್ಟೆ ಸಮಿತಿಯಿಂದ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿದ್ದು, ಮಾರಾಟಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರುಗಳೆಂದರೆ ಹಮಾಲರು, ತೂಕ ಮಾಡುವವರು, ಚಕ್ಕಡಿಯವರು, ವರ್ತಕರಲ್ಲಿ, ದಲ್ಲಾಳಿ ಏಜೆಂಟರಲ್ಲಿ, ದಾಸ್ತಾನುದಾರ ಅಂಗಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕರು, ಇವರುಗಳಿಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಪೂರ್ಣ ಪ್ರಮಾಣದಲ್ಲಿ ವ್ಯಾಪಾರ ವಹಿವಾಟು ನಡೆಯದೆ ವರ್ಷಪೂರ್ತಿ ಉದ್ಯೋಗ ಹಾಗೂ ಜೀವನೋಪಾಯ ನಡೆಸಲು ಕಷ್ಟಸಾಧ್ಯವಾಗಿರುತ್ತದೆ.

(ಐ) ಕನಿಷ್ಠ ಬೆಂಬಲ ಬೆಲೆ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ರಚಿಸಿರುವ ಆವರ್ತಕ ನಿಧಿಗಳಿಗೆ ಎಪಿಎಂಸಿ-ಗಳು ತಮ್ಮ ಕೊಡುಗೆಯನ್ನು ನೀಡುತ್ತಿವೆ. ಅಧಿನಿಯಮದ ತಿದ್ದುಪಡಿಗೆ ಮೊದಲು ಮಾರುಕಟ್ಟೆ ಪ್ರಾಂಗಣದಲ್ಲಿ ಕೇಂದ್ರ ಸರ್ಕಾರವು ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಉತ್ಪನ್ನಗಳ ಬೆಲೆ ಕಡಿಮೆಯಾದಂತಹ ಸಂದರ್ಭದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನಕ್ಕಾಗಿ ಮಾರುಕಟ್ಟೆ ಸಮಿತಿಗಳು ಪಾವತಿಸುವ ಆವರ್ತ ನಿಧಿ ವಂತಿಗೆಯಲ್ಲಿ, ವಾರ್ಷಿಕವಾಗಿ ಅಂದಾಜು ರೂ.125 ಕೋಟಿಗಳಿದ್ದು, ತಿದ್ದುಪಡಿಯ ಕಾರಣದಿಂದಾಗಿ ಎಪಿಎಂಸಿಗಳ ಪಾತ್ರವು ಮಾರುಕಟ್ಟೆ ಪ್ರಾಂಗಣಗಳಿಗೆ ನಿರ್ಬಂಧಿಸಿರುವುದರಿಂದ ಆವರ್ತ ನಿಧಿಗೆ ಎಪಿಎಂಸಿ-ಗಳ ಕೊಡುಗೆಯು ಶೇ.50 ರಷ್ಟು ಕುಸಿತಗೊಂಡು ಪ್ರಸ್ತುತ ರೂ.60.00 ಕೋಟಿಗಳಾಗಿರುತ್ತದೆ.

(ಜೆ) ಮಾರುಕಟ್ಟೆ ಪ್ರಾಂಗಣಗಳಲ್ಲಿ ನಡೆಯುವ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ವಿವರಗಳಲ್ಲಿ, ಚಾಲ್ತಿಯಲ್ಲಿರುವ ಕೃಷಿ ಉತ್ಪನ್ನಗಳ ಬೆಲೆ ಮಾಹಿತಿ ಹಾಗೂ ಸರಕು ಆವಕಗಳ ಪ್ರಮಾಣವು ಲಭ್ಯವಾಗುವುದರಿಂದ ಸರ್ಕಾರಕ್ಕೆ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಆದರೆ, ಪ್ರಾಂಗಣದ ಹೊರಗಿನ ವಹಿವಾಟಿನಲ್ಲಿ ಸದರಿ ಮಾಹಿತಿಯು ಲಭ್ಯವಾಗದ ಕಾರಣ ವಿಶ್ವಾಸನೀಯ ದತ್ತಾಂಶಗಳ ಕೊರತೆಯಿಂದಾಗಿ ಸರ್ಕಾರಕ್ಕೆ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಸರಿಯಾದ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

(ಕೆ) ಮಾರುಕಟ್ಟೆ ಪ್ರಾಂಗಣಗಗಳ ಹೊರಗೆ ವ್ಯಾಪಾರ ವಹಿವಾಟಿಗೆ ಅನುಮತಿಸಿ, ಈ ಹಿಂದೆ ತಿದ್ದುಪಡಿ ತರುವ ಮೂಲಕ ರೈತರ ಉತ್ಪನ್ನದ ಬೆಲೆ ಹಾಗೂ ಆದಾಯದಲ್ಲಿ ಹೆಚ್ಚಳವಾಗುವದೆಂಬ ನಿರೀಕ್ಷೆಗಳು ವಿಫಲವಾಗಿರುವುದು ಗಮನಕ್ಕೆ ಬಂದಿರುತ್ತದೆ.

(ಎಲ್) ರಾಜ್ಯದಲ್ಲಿ ಎಪಿಎಂಸಿ-ಗಳು ವಿಧಿಸುತ್ತಿದ್ದ ಮತ್ತು ಸಂಗ್ರಹಿಸುತ್ತಿದ್ದ ಮಾರುಕಟ್ಟೆ ಶುಲ್ಕವನ್ನು ಮಾರುಕಟ್ಟೆಗಳ ಪ್ರಾಂಗಣಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ಎಪಿಎಂಸಿ-ಗಳ ನಿರ್ವಹಣೆಗಾಗಿ ಬಳಸಲಾಗುತ್ತಿತ್ತು. ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ನಡೆಯುವ ವಹಿವಾಟಿನ ಕಾರಣದಿಂದಾಗಿ ಎಪಿಎಂಸಿ-ಗಳು ಮಾರುಕಟ್ಟೆ ಶುಲ್ಕವನ್ನು ವಿಧಿಸಲು ಮತ್ತು ಸಂಗ್ರಹಿಸಲು ಅವಕಾಶವಿಲ್ಲದಿರುವ ಕಾರಣ ಅವುಗಳ ಆದಾಯದಲ್ಲಿ ಗಣನೀಯ ಪರಿಣಾಮವುಂಟಾಗಿರುತ್ತದೆ. ಇದರಿಂದ ಶೇ.50ರಷ್ಟು ಆದಾಯ ಕುಸಿತವಾಗಿದ್ದು, ಪ್ರಾಂಗಣಗಳ ನಿರ್ವಹಣೆ ಮತ್ತು ಇತರ ಹೊಣೆಗಾರಿಕೆಗಳಿಗೆ ತೊಂದರೆಯಾಗಿರುತ್ತದೆ.

4. ಪ್ರಸ್ತುತ, ರಾಜ್ಯ ಸರ್ಕಾರವು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 8(2), ಪ್ರಕರಣ 8(3) ಹಾಗೂ ಪ್ರಕರಣ 117ಕ್ಕೆ ಅಧಿನಿಯಮ ಸಂಖ್ಯೆ:59/2020ರ ಮೂಲಕ ಕೈಗೊಂಡ ತಿದ್ದುಪಡಿಯ ಉದ್ದೇಶಗಳು ಈಡೇರಿರುವುದಿಲ್ಲವಾದ್ದರಿಂದ, ಮಾರುಕಟ್ಟೆ ಪ್ರಾಂಗಣಗಳ ಹೊರಗಡೆ ಮಾರುಕಟ್ಟೆ ಪ್ರದೇಶದಲ್ಲಿ ನಡೆಯುವ ವಹಿವಾಟಿನ ಮೇಲೆ ಈ ಹಿಂದಿನಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣವನ್ನು ಹೊಂದುವುದು ರೈತ ಬೆಳೆಗಾರರ ಹಿತದೃಷ್ಟಿಯಿಂದ ಮುಖ್ಯವಾಗಿರುವುದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 8(2), ಪ್ರಕರಣ 8(3) ಹಾಗೂ ಪ್ರಕರಣ 117ಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

5. ಅಲ್ಲದೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 72(4)ಕ್ಕೆ, ಅಧಿನಿಯಮ ಸಂಖ್ಯೆ:05/2014ರ ಮೂಲಕ ತಿದ್ದುಪಡಿ ಮಾಡಿ ದಿನಾಂಕ:04/01/2014 ರಂದು ಜಾರಿಗೊಳಿಸಲಾಗಿದೆ. ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಅವರಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗಳು ವ್ಯಾಪಾರಿಗಳ ಲೈಸೆನ್ಸ್ ನೀಡಲು ಅಧಿಕಾರವನ್ನು ಹೊಂದಿರುತ್ತಾರೆ. ಸದರಿ ಅಧಿನಿಯಮದ 8ನೇ ಪ್ರಕರಣವು ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣವನ್ನು ಉಪಬಂಧಿಸುತ್ತದೆ. ಹಾಗೂ 8(1)(ಬಿ) ಪ್ರಕರಣವು ಮಂಜೂರಾದ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ನಡೆಸತಕ್ಕದ್ದೆಂದು ನಿರ್ದಿಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಅಧಿನಿಯಮದ ಪ್ರಕರಣ 72(4)ರ ಅಡಿಯಲ್ಲಿ ಮಾಡಲಾದ ತಿದ್ದುಪಡಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೃಷಿ ಮಾರುಕಟ್ಟೆ ನಿರ್ದೇಶಕರು ಅಥವಾ ಅವರಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗೆ ಪ್ರಕರಣ 8(1)(ಬಿ) ಅಡಿಯಲ್ಲಿ ಅಧಿಕಾರಗಳನ್ನು ನೀಡುವುದು ಕಾನೂನಾತ್ಮಕವಾಗಿ ಅವಶ್ಯಕವಾಗಿರುತ್ತದೆ.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಶಿವಾನಂದ ಎಸ್ ಪಾಟೀಲ್**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ಉದ್ಧೃತ ಭಾಗ

xx xx xx

**8. ಕೃಷಿ ಉತ್ಪನ್ನದ ಕ್ರಯವಿಕ್ರಯದ ನಿಯಂತ್ರಣ.-** .- (1) ಮಾರುಕಟ್ಟೆ ಸ್ಥಾಪನೆಯ ತರುವಾಯ,-

(ಎ) ಯಾವ ಸ್ಥಳೀಯ ಪ್ರಾಧಿಕಾರವೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಧಿಸೂಚಿಸಲಾದ ಯಾವುದೇ ಕೃಷಿ ಉತ್ಪನ್ನದ ಕ್ರಯ ವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿ ಯಾವುದೇ ಸ್ಥಳವನ್ನು ಸ್ಥಾಪಿಸತಕ್ಕುದಲ್ಲ, ಸ್ಥಾಪಿಸಲು ಅಧಿಕಾರ ನೀಡತಕ್ಕುದಲ್ಲ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸತಕ್ಕುದಲ್ಲ ಅಥವಾ ಸ್ಥಾಪಿಸುವುದಕ್ಕೆ, ಸ್ಥಾಪಿಸಲು ಅಧಿಕಾರ ನೀಡುವುದಕ್ಕೆ ಅಥವಾ ಸ್ಥಾಪಿಸಿರುವಲ್ಲಿ ಮುಂದುವರಿಸುವುದಕ್ಕೆ ಅನುಮತಿಸತಕ್ಕುದಲ್ಲ:

ಪರಂತು, ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳು ಮತ್ತು ಉಪವಿಧಿಗಳು ಮತ್ತು ಮಾರುಕಟ್ಟೆ ಸಮಿತಿಯ ಸ್ಥಾಯೀ ಆದೇಶಗಳಿಗೆ ಅನುಸಾರವಾಗಿ ಹೊರತು, ಅಂಥ ಸ್ಥಳದಲ್ಲಿ ಮಾರುಕಟ್ಟೆ ಕಾರ್ಯನಿರ್ವಾಹಕನು ವ್ಯವಹಾರ ನಡೆಸತಕ್ಕುದಲ್ಲ ಎಂಬ ಷರತ್ತುಗಳಿಗೊಳಪಟ್ಟು ದನಕರು, ಕುರಿ, ಮತ್ತು ಆಡುಗಳ ಹೊರತಾಗಿ]ಯಾವುದೇ ಅಧಿಸೂಚಿತ ಕೃಷಿ ಉತ್ಪನ್ನದ ಚಿಲ್ಲರೆ ಮಾರಾಟಕ್ಕಾಗಿ ಯಾವುದೇ ಸ್ಥಳವನ್ನು ಸ್ಥಾಪಿಸಬಹುದು ಅಥವಾ ಮುಂದುವರಿಸಬಹುದು;

(ಬಿ) ಈ ಸಂಬಂಧದಲ್ಲಿ ಮಾರುಕಟ್ಟೆ ಸಮಿತಿಯು ಮಂಜೂರು ಮಾಡಿದ ಲೈಸೆನ್ಸಿನ ಹೊರತು ಅಥವಾ ಅನ್ಯಥಾ ಅಂಥ ಲೈಸನ್ಸಿನ ನಿಬಂಧನೆಗಳ ಮತ್ತು ಷರತ್ತುಗಳ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು,-

(i) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕುದಲ್ಲ,ಅಥವಾ

(ii) ಅಧಿಸೂಚಿತ ಕೃಷಿ ಉತ್ಪನ್ನದ ಕ್ರಯವಿಕ್ರಯಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಾಪಾರಿ, ಕಮೀಷನ್ ಏಜೆಂಟ್, ದಳ್ಳಾಳಿ, ಸಂಸ್ಕರಣಕಾರ,ತೂಕ ಮಾಡುವವ, ಉಗ್ರಾಣಪಾಲಕ ಎಂಬವನಾಗಿ ಅಥವಾ ಯಾವುದೇ ಅಧಿಕಾರ ಸಾಮರ್ಥ್ಯದಲ್ಲಿ ಮಾರುಕಟ್ಟೆ ಪ್ರದೇಶದಲ್ಲಿಅಥವಾ ಅದರಲ್ಲಿರುವ ಯಾವುದೇ ಮಾರುಕಟ್ಟೆಯಲ್ಲಿ ವ್ಯವಹರಿಸತಕ್ಕುದಲ್ಲ:

ಪರಂತು (ಬಿ) ಖಂಡದಲ್ಲಿರುವುದಾವುದೂ,-

(i) ಅಂಥ ಉತ್ಪನ್ನದ ಉತ್ಪಾದಕನು ತಾನೇ ಮಾರಾಟಗಾರನಾಗಿದ್ದಲ್ಲಿ ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ, ಅಥವಾ

(ii) ಅಂಥ ಉತ್ಪನ್ನದ ಖರೀದಿದಾರನು ತನ್ನ ಗೃಹಬಳಕೆಗಾಗಿ ಅಂಥ ಉತ್ಪನ್ನವನ್ನು ಖರೀದಿಸುವ ವ್ಯಕ್ತಿಯಾಗಿದ್ದಲ್ಲಿ, ಅಂಥ ಕೃಷಿ ಉತ್ಪನ್ನದ ಮಾರಾಟಕ್ಕೆ - ಅನ್ವಯವಾಗತಕ್ಕುದಲ್ಲ.

(2) ಮಾರುಕಟ್ಟೆ ಸಮಿತಿಯು, ಮಾರುಕಟ್ಟೆ ಪ್ರಾಂಗಣಗಳಲ್ಲಿ, ಮಾರುಕಟ್ಟೆ ಉಪ ಪ್ರಾಂಗಣಗಳಲ್ಲಿ ಮತ್ತು ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟವನ್ನು ನಿಯಂತ್ರಿಸತಕ್ಕದ್ದು.

xx xx xx

**117. 8ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ.-** 8ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಕೃಷಿ ಉತ್ಪನ್ನವನ್ನು ಮಾರಾಟ ಮಾಡುವುದಕ್ಕಾಗಿ ಮಾರುಕಟ್ಟೆ ಪ್ರದೇಶದಲ್ಲಿನ ಯಾವುದೇ ಸ್ಥಳವನ್ನು ಉಪಯೋಗಿಸುವ ಅಥವಾ ಸಿಂಧುವಾದ ಲೈಸನ್ಸ್ ಇಲ್ಲದೆ ವ್ಯಾಪಾರಿಯಾಗಿ, ದಳ್ಳಾಳಿಯಾಗಿ, ಬ್ರೋಕರ್‌ನಾಗಿ, ಸಂಸ್ಕರಣಗಾರನಾಗಿ, ದಾಸ್ತಾನುಗಾರನಾಗಿ ಅಥವಾ

ಯಾವುದೇ ಇತರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವ ಯಾವನೇ ವ್ಯಕ್ತಿಯು ಅಥವಾ 8ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನದ ಖರೀದಿಗಾಗಿ, ಅಥವಾ ಮಾರಾಟಕ್ಕಾಗಿ ಬಳಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣೀತನಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ ಐದುನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮೊದಲನೆಯ ಅಪರಾಧ ನಿರ್ಣಯದ ಅನಂತರ ಉಲ್ಲಂಘನೆಯು ಮುಂದುವರಿದ ಅವಧಿಯ ಪ್ರತಿದಿನಕ್ಕೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

xx xx xx

**ಅನುಬಂಧ–02**

## ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ: 08ನೇ ಸೆಪ್ಟೆಂಬರ್, 2023**

ಸಂಖ್ಯೆ: **42**

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2023ನ್ನು** ಕರ್ನಾಟಕ ವಿಧಾನ ಪರಿಷತ್ತಿನ 150ನೇ ಅಧಿವೇಶನದಲ್ಲಿ ದಿನಾಂಕ:18.07.2023ರಂದು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಲ್ಪಟ್ಟ ಸಂದರ್ಭದಲ್ಲಿ ಅನೇಕ ಶಾಸಕರುಗಳ ಕೋರಿಕೆ ಮೇರೆಗೆ ಸದರಿ ವಿಧೇಯಕವನ್ನು ಸಮಗ್ರವಾಗಿ ಪರಿಶೀಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 116ರ ರೀತ್ಯಾ ಮಾನ್ಯ ಸಭಾಪತಿಯವರು ಪರಿಶೀಲನಾ ಸಮಿತಿಗೆ ವಹಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 229ರ ಅನ್ವಯ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಮೂರು ತಿಂಗಳೊಳಗಾಗಿ ಸದನಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

**ಶ್ರೀಯುರತುಗಳಾದ**

| | | |
|---|---|---|
| 1. | ಶಿವಾನಂದ ಎಸ್ ಪಾಟೀಲ್ | ಅಧ್ಯಕ್ಷರು ಹಾಗೂ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| 2. | ಹೆಚ್.ಕೆ. ಪಾಟೀಲ | ಸದಸ್ಯರು ಹಾಗೂ ಮಾನ್ಯ ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |
| 3. | ಎಸ್. ರವಿ | ಸದಸ್ಯರು |
| 4. | ಪ್ರಕಾಶ್ ಕೆ. ರಾಥೋಡ್ | ಸದಸ್ಯರು |
| 5. | ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 6. | ಡಿ.ಎಸ್. ಅರುಣ್ | ಸದಸ್ಯರು |
| 7. | ಎಂ.ಎಲ್. ಅನಿಲ್ ಕುಮಾರ್ | ಸದಸ್ಯರು |
| 8. | ಕೇಶವ ಪ್ರಸಾದ್ ಎಸ್. | ಸದಸ್ಯರು |
| 9. | ಹೇಮಲತಾ ನಾಯಕ್ | ಸದಸ್ಯರು |

ಕೆ.ಆರ್. ಮಹಾಲಕ್ಷ್ಮಿ,
ಕಾರ್ಯದರ್ಶಿ.

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council.htm

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ.852/ಪಿ5